# THE EPISTLE OF PAUL THE APOSTLE TO THE COLOSSIANS.

## ಅಪೊಸ್ತಲನಾದ ಪೌಲನು ಕೊಲೊಸ್ಸೆಯರಿಗೆ ಬರೆದ ಪತ್ರಿಕೆಯ ಪೀಠಿಕೆ.

ಚಿಕ್ಕ ಆಸ್ಯದ ಫ್ರುಗ್ಯ ದೇಶದ ಪಟ್ಟಣಗಳಲ್ಲಿ ಕೊಲೊಸ್ಸೆ ಎಂಬುವದು ಮುಖ್ಯ ಪಟ್ಟಣವಾಗಿತ್ತು. ಎರಡು ನದಿಗಳ ಸಮೀಪವಾದ ತಗ್ಗಿನಲ್ಲಿ ಈ ಪಟ್ಟಣವು ವಸತಿಯಾಗಿ ಕಟ್ಟಲ್ಪಟ್ಟಿತ್ತು. ಈ ಪತ್ರಿಕೆ ಬರೆಯಲ್ಪಟ್ಟ ಕಾಲದಲ್ಲಿ ಆ ದೇಶವು ಮಹಾ ಫಲಭರಿತವಾದದ್ದಾಗಿದ್ದರೂ, ಈ ಕಾಲದಲ್ಲಿ ಅದು ತುರುಕರ ಧೊರೆತನಕ್ಕೊಳಗಾಗಿ ನಿಷ್ಫಲವಾದ ಕಾಡಾಗಿದೆ.

ಪೌಲನು ಫ್ರುಗ್ಯ ದೇಶದ ಮಾರ್ಗವಾಗಿ ಎರಡನೇ ಸಾರಿ ಪ್ರಯಾಣ ಮಾಡಿದನು. (ಅಪೊ. ಕ್ರಿ. ೧೬. ೬; ೧೮. ೨೩.) ಆದಾಗ್ಯೂ ಒಂದು ಪ್ರಯಾಣದಲ್ಲಾದರೂ, ಆ ದೇಶದ ದಕ್ಷಿಣ ಭಾಗದಲ್ಲಿರುವ ಕೊಲೊಸ್ಸೆ ಪಟ್ಟಣಕ್ಕೆ ಅವನು ಹೋಗಿದ್ದನೆಂದು ತೋರುವದಿಲ್ಲ. ಅವನು ಮೊದಲನೇ ಸಾರಿ ಪ್ರಯಾಣ ಮಾಡಿದಾಗ ದೈವಯತ್ನದಿಂದ ಅವನು ಶೀಘ್ರವಾಗಿ ತ್ರೋಯ ಪಟ್ಟಣಕ್ಕೆ ಹೋಗಲೂ, ಅಲ್ಲಿಂದ ಹಡಗಮಾರ್ಗವಾಗಿ ಯೂರೊಪು ಖಂಡಕ್ಕೆ ಹೋಗಲೂ ಸಂಭವಿಸಿತು. (ಅಪೊ. ಕ್ರಿ. ೧೬. ೬—೧೦.) ಎರಡನೇ ಸಾರಿ ಅವನು ಅಂತ್ಯೋಕ್ಯದಿಂದ ಹೊರಟು ಎಫೆಸ ಪಟ್ಟಣಕ್ಕೆ ಪ್ರಯಾಣ ಮಾಡಿದಾಗ ಗಲಾತ್ಯ ಫ್ರುಗ್ಯ ದೇಶಗಳ ಮಾರ್ಗವಾಗಿ ಹೋದನು. (ಅಪೊ. ಕ್ರಿ. ೧೮. ೨೩, ೧೯. ೧. ವಚನಗಳ ವ್ಯಾಖ್ಯಾನಗಳಲ್ಲಿ ನೋಡಬೇಕು.) ಕೊಲೊಸ್ಸೆಯರೂ ಲವೋದಿಕ್ಯರೂ ಪೌಲನ ಮುಖಪರಿಚಿತಿಇಲ್ಲದವರೆಂದು ಈ ಪತ್ರಿಕೆಯ ೨. ೧. ವಚನದಲ್ಲಿ ಹೇಳಿರುವದರಿಂದ, ಪೌಲನು ಇದಕ್ಕೆ ಮುಂಚೆ ಅವರನ್ನು ನೋಡಿರಲಿಲ್ಲವೆಂದು ಅನೇಕ ವಿದ್ವಾಂಸರು ಹೇಳುತ್ತಾರೆ. ಈ ಪತ್ರಿಕೆಯಲ್ಲಿ ಪೌಲನು ಮತ್ತೊಬ್ಬರ ಬೋಧನೆಯನ್ನು ಕುರಿತು ಹೇಳುವದೇ ಹೊರ್ತು, ತನ್ನ ಸ್ವಂತ ಬೋಧನೆಯನ್ನು ಕುರಿತು ಏನೂ ಹೇಳಲಿಲ್ಲ.

ಪಂಚಾಶತ್ತಿನ ದಿವಸದಲ್ಲಿ ಫ್ರುಗ್ಯ ದೇಶದಿಂದ ಕೆಲವು ಯೆಹೂದ್ಯರು ಯೆರೂಸಲೇಮಿನಲ್ಲಿ ಇದ್ದರೆಂದು ಹೇಳಿ ಇದೆ. (ಅಪೊ. ಕ್ರಿ. ೨. ೧೦.) ಇವರಲ್ಲಿ ಕೆಲಬರು ಅಪೊಸ್ತಲನಾದ ಪೇತ್ರನ ಪ್ರಸಂಗವನ್ನು ಕೇಳಿ ಗುಣ ಪಟ್ಟು, ತಮ್ಮ ದೇಶಕ್ಕೆ ಹೋಗಿ ಕ್ರಿಸ್ತನ ರಕ್ಷಣೆಯನ್ನು ಕುರಿತು ಸಾರಿ ಹೇಳಿರಬಹುದು. ಆ ಕಾಲದಲ್ಲಿ ಕೊಲೊಸ್ಸೆ ಸಭೆಯಲ್ಲಿ ಎಪಫ್ರನು ಮುಖ್ಯ ಬೋಧಕನಾಗಿದ್ದನೆಂದು ತೋರುತ್ತದೆ. (೧. ೭.)

ಪೌಲನು ಎಫೆಸ ಪಟ್ಟಣದಲ್ಲಿ ಬಹು ಕಾಲ ಸಂಚರಿಸುತ್ತಿದ್ದಾಗ, ಆಸ್ಯದಲ್ಲಿ ವಾಸವಾಗಿದ್ದ ಯೆಹೂದ್ಯರೂ ಗ್ರೇಕರೂ ಆದ ಎಲ್ಲರೂ ಕರ್ತನಾದ ಯೇಸುವಿನ ವಾಕ್ಯವನ್ನು ಕೇಳಿದರೆಂದು ಹೇಳಿ ಇದೆ. (ಅಪೊ. ಕ್ರಿ. ೧೯. ೧೦.) ಅವರಲ್ಲಿ ಕೊಲೊಸ್ಸೆ ಪಟ್ಟಣದವರಾದ ಎಪಫ್ರನೂ ಫಿಲೆಮೋನನೂ ಅವನ ಮನೆಯವರು ಮುಂತಾದವರೂ ಸೇರಿರಬಹುದು. ಇವರು ಕೊಲೊಸ್ಸೆ ಸಭೆಯ ಮುಖ್ಯಸ್ಥರಾಗಿದ್ದರೆಂದು ಪ್ರತ್ಯಕ್ಷವಾಗಿದೆ.

ಪೌಲನು ರೋಮಪುರಿಯಲ್ಲಿ ಮೊದಲನೇ ಸಾರಿ ಸೆರೆಯಲ್ಲಿದ್ದಾಗ ಈ ಪತ್ರಿಕೆ ಬರೆಯಲ್ಪಟ್ಟಿತು. (೧. ೨೪; ೪. ೧೮.) ಎಫೆಸ್ಯರ ಪತ್ರಿಕೆಯನ್ನೂ ಫಿಲೆಮೋನನ ಪತ್ರಿಕೆಯನ್ನೂ ತೆಗೆದು ಕೊಂಡು ಹೋದ ತುಕಿಕನು ಒನೇಸಿಮನು ಎಂಬವರು ಈ ಪತ್ರಿಕೆಯನ್ನು ಸಹ ತೆಗೆದು ಕೊಂಡು ಹೋದದರಿಂದ ಮೇಲೆ ಹೇಳಿದ ಪತ್ರಿಕೆಗಳು ಬರೆಯಲ್ಪಟ್ಟ ಕಾಲದಲ್ಲಿಯೇ ಇದು ಸಹ ಬರೆಯಲ್ಪಟ್ಟಿತೆಂದು ತೋರುತ್ತದೆ. (೪. ೭, ೯. ಎಫೆ. ೬. ೨೧, ೨೨.) ಇದು ಸುಮಾರು ೬೩ನೇ ವರುಷದಲ್ಲಿ ಬರೆಯಲ್ಪಟ್ಟಿರಬಹುದು.

ಕೊಲೊಸ್ಸೆ ಸಭೆಯ ಮುಖ್ಯ ಬೋಧಕನಾದ ಎಪಫ್ರನು ಈ ಪತ್ರಿಕೆ ಬರೆಯಲ್ಪಟ್ಟ ಕಾಲದಲ್ಲಿ ರೋಮಪುರಿಯಲ್ಲಿ ಪೌಲನ ಸಂಗಡ ಇದ್ದದರಿಂದ(೪. ೧೨. ಫಿಲೆಮೋ. ೨೩. ವ.) ಅವನು ಆ ಸಭೆಯ ವರ್ತಮಾನಗಳನ್ನೆಲ್ಲಾ ಪೌಲನಿಗೆ ತಿಳಿಸಿ ಇರುವನು. ಕೊಲೊಸ್ಸೆ ಸಭೆಗೆ ಆ ಕಾಲದಲ್ಲಿ ಉಪದ್ರ ಉಂಟಾಗಿದ್ದಾಗ್ಯೂ, (೧. ೧೧.) ಕೂಡುವ ಮಟ್ಟಿಗೆ ಅದು ಒಳ್ಳೇ ಸ್ಥಿತಿಯಲ್ಲಿ ಇತ್ತೆಂದು ತೋರುತ್ತದೆ. (೧. ೫, ೬, ೯; ೨. ೫, ೬.) ಆದಾಗ್ಯೂ ಒಂದು ವಿಧವಾದ ತತ್ವಶಾಸ್ತ್ರಗಳಿಂದ ಸಭೆಗೆ ವಿಘ್ನ ಸಂಭವಿಸಿತ್ತು. ಅವರು ಅಜ್ಞಾನಶಾಸ್ತ್ರವನ್ನೂ ಯೆಹೂದ್ಯರ ಆಚಾರಗಳನ್ನೂ ಒಂದಾಗಿ ಕಲಸಿ, ಜ್ಞಾನ, ತಿಳುವಳಿಕೆ, ದಿವ್ಯ ಸಂಪೂರ್ಣತ್ವ, ದೂತರ ಮಹಿಮೆ ಮುಂತಾದ ವಿಷಯಗಳನ್ನು ಕುರಿತು ವಿಪರೀತ ತಾತ್ಪರ್ಯವುಳ್ಳವರಾಗಿ, ಯೆಹೂದ್ಯರ ಆಚಾರಗಳನ್ನೂ ಸನ್ಯಾಸಕ್ಕೆ ತಕ್ಕ ಕ್ರಮಗಳನ್ನೂ ಬೋಧಿಸಿದ್ದರಿಂದ, (೨. ೮—೨೩.) ಕೊಲೊಸ್ಸೆ ಸಭೆಯವರು ಕ್ರಿಸ್ತನ ಮೇಲಿರ ತಕ್ಕ ಭಕ್ತಿ ವಿಶ್ವಾಸವನ್ನೂ, ಆತನಿಗೆ ಸಲ್ಲಿಸಬೇಕಾದ ಆರಾಧನೆಯನ್ನೂ ಬಿಟ್ಟು ಜಾರಿ ಹೋಗುವದಕ್ಕೆ ಹೇತುವೆಯಾಗಿತ್ತು.

ಆದದರಿಂದ ಈ ಪತ್ರಿಕೆಯಲ್ಲಿ ಕ್ರಿಸ್ತನ ಶ್ರೇಷ್ಠ ಮಹತ್ವವನ್ನೂ, ಆತನ ರಕ್ಷಣೆಯ ಸಂಪೂರ್ಣತ್ವವನ್ನೂ, ಆತನ ಸಭೆಯ ಮೇಲಾದ ಶ್ಲಾಘ್ಯವನ್ನೂ ವಿವರಿಸಿ ತೋರಿಸಿ ಇದೆ. ಮತ್ತು ಕಳ್ಳಬೋಧಕರಿಗೆ ತೊಲಗಲೂ, ಸತ್ಯ ವಾಕ್ಯವಾದ ಸುವಾರ್ತೆಯನ್ನು ಸ್ಥಿರವಾಗಿ ಅನುಸರಿಸಲೂ, ಆತನ ದಾಸರಿಗೆ ತಕ್ಕಂಥ ಪರಿಶುದ್ಧತ್ವವುಳ್ಳವರಾಗಿ ನಡಿಯಲೂ ಬೇಕೆಂಬ ಕಟ್ಟಳೆಗಳು ಅಡಗಿವೆ.



ಈ ಪತ್ರಿಕೆಯೂ ಎಫೆಸ್ಯರ ಪತ್ರಿಕೆಯೂ ಒಂದೇ ಕಾಲದಲ್ಲಿ ಬರೆಯಲ್ಪಟ್ಟದ್ದರಿಂದಲೂ, ಎರಡು ಸಭೆಗಳೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸ್ಥಿತಿಯಲ್ಲಿ ಇದ್ದದರಿಂದಲೂ, ತಾತ್ಪರ್ಯದಲ್ಲಿಯೂ ವಾಕ್ಯನಡೆಯಲ್ಲಿಯೂ ಈ ಎರಡು ಪತ್ರಿಕೆಗಳಿಗೂ ಬಹಳ ಸಮ್ಮಂಧ ಉಂಟು. ಕಳ್ಳಬೋಧಕರಿಗೆ ತೊಲಗುವ ಹಾಗೆ ಕೊಲೊಸ್ಸೆ ಸಭೆಯುವರಿಗೆ ಆಗಾಗ್ಯೆ ಹೇಳಲ್ಪಟ್ಟ ಎಚ್ಚರಿಕೆಯಲ್ಲಿ ಮಾತ್ರ ಭೇದವಾಗಿದೆ:

ಈ ಪತ್ರಿಕೆ ಮೂರು ಭಾಗಗಳಾಗಿದೆ.

I. ಕೊಲೊಸ್ಸೆ ಸಭೆಯುವರ ಸ್ಥಿತಿಯೂ, ಕ್ರಿಸ್ತನ ಮಹತ್ವವೂ, ಸುವಾರ್ತೆಯ ಪ್ರಬಲಕ್ಕಾಗಿ ಪೌಲನು ಮಾಡಿದ ಯತ್ನಗಳೂ ತೋರಿಸಲ್ಪಟ್ಟವೆ. (೧. ೧—೨. ೫. ವರಿಗೂ.)

II. ಸುವಾರ್ತೆಯ ಸತ್ಯದ ಮಹತ್ವವನ್ನು ಹೀನ ಮಾಡಿದ ತತ್ವಶಾಸ್ತ್ರವನ್ನು ಖಂಡಿಸಿದ್ದು. (೨. ೬—೩. ೪. ವರಿಗೂ.)

III. ಕ್ರೈಸ್ತರು ನಡೆಯ ತಕ್ಕ ಕಟ್ಟಳೆಗಳು. (೩. ೫—೪. ೬. ವರಿಗೂ.) ಅಂತ್ಯೋಕ್ತಿ. (೪. ೬—೧೮. ವರಿಗೂ.)

# THE EPISTLE OF PAUL THE APOSTLE TO THE COLOSSIANS.

## ಅಪೊಸ್ತಲನಾದ ಪೌಲನು
# ಕೊಲೊಸ್ಸೆಯರಿಗೆ ಬರೆದ ಪತ್ರಿಕೆ.

ಸಭೆಯನ್ನು ಹರಸಿದ್ದು; ಅದರ ಭಕ್ತಿಯ ಅಭಿವೃದ್ಧಿಗಾಗಿ ದೇವರನ್ನು ಸ್ತುತಿಸಿದ್ದು.

1. [1]ದೇವರ ಚಿತ್ತದಿಂದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನೂ, ಸಹೋದರನಾದ ತಿಮೊಥೆಯನೂ,
೨ ಕೊಲೊಸ್ಸೆಯಲ್ಲಿರುವ ಪರಿಶುದ್ಧರೂ ಕ್ರಿಸ್ತನಲ್ಲಿ ನಂಬಿಕೆಯುಳ್ಳ ಸಹೋದರರೂ ಆಗಿರುವವರಿಗೆ—ನಮ್ಮ ತಂದೆ
ಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.
೩ ಸುವಾರ್ತೆಯ ಸತ್ಯದ ವಾಕ್ಯದಲ್ಲಿ ನೀವು ಮುಂಚೆ ಕೇಳಿದಂಥ, ಪರಲೋಕದಲ್ಲಿ ನಿಮಗೆ ಇಟ್ಟಿರುವಂಥ
೪ [2]ನಿರೀಕ್ಷೆಗೋಸ್ಕರ ನೀವು ಕ್ರಿಸ್ತ ಯೇಸುವಿನಲ್ಲಿಡುವ ವಿಶ್ವಾಸವನ್ನೂ, ಪರಿಶುದ್ಧರೆಲ್ಲರಿಗೆ ಮಾಡುವ ಪ್ರೀತಿಯ
೫ ನ್ನೂ ಕೇಳಿ, ಎಂದಿಗೂ ನಿಮಗೋಸ್ಕರ ಪ್ರಾರ್ಥಿಸಿ, ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ
೬ ದೇವರಿಗೆ ಸ್ತೋತ್ರ ಮಾಡುತ್ತೇವೆ. ಆ ಸುವಾರ್ತೆಯು [3]ಸಮಸ್ತ ಲೋಕದಲ್ಲಿ ಬಂದ ಹಾಗೆ, ನಿಮಗೂ
ಬಂದು, ನೀವು [4]ಸತ್ಯದಲ್ಲಿ ದೇವರ ಕೃಪೆಯನ್ನು ಕೇಳಿ ತಿಳಿದ ದಿವಸದಿಂದ ನಿಮ್ಮಲ್ಲಿಯೂ ಫಲಿಸುವ ಪ್ರಕಾರ,
೭ ಫಲಿಸುತ್ತದೆ. ಹಾಗೆಯೇ ನಿಮಗೋಸ್ಕರ ಕ್ರಿಸ್ತನ ನಂಬಿಕೆಯುಳ್ಳ ಸೇವಕನಾಗಿರುವ ನಮ್ಮ ಪ್ರಿಯ ಜತೆ
೮ ದಾಸನಾದ [5]ಎಪಫ್ರನಿಂದಲೂ ಕಲಿತಿರಿ. ಅವನೇ ಆತ್ಮದಲ್ಲಿರುವ ನಿಮ್ಮ ಪ್ರೀತಿಯನ್ನು ನಮಗೆ ತಿಳಿಸಿದನು.

ಕ್ರಿಸ್ತನ ವಿಷಯವಾದ ತಿಳುವಿಕೆಯಿಂದ ಸಭೆಗೆ ಭಕ್ತಿ ಅಭಿವೃದ್ಧಿಯಾಗುವಂತೆ ಪ್ರಾರ್ಥಿಸಿದ್ದು.

೯ [6]ಇದರ ನಿಮಿತ್ತ ನಾವು ಸಹ ಕೇಳಿದ ದಿವಸದಿಂದ ಎಡೆ ಬಿಡದೆ ನಿಮಗೋಸ್ಕರ ಪ್ರಾರ್ಥಿಸಿ, ನೀವು ಸಕಲ

1. ಪೌಲನು ತನ್ನ ವಾಡಿಕೆಯ ಪ್ರಕಾರ ಕೊಲೊಸ್ಸೆ ಸಭೆಯವರಿಗೆ ಆಶೀರ್ವಾದ ಹೇಳಿ, (೧, ೨. ವ.) ತರುವಾಯ ಎಪಫ್ರನ ಸೇವೆಯ ಮೂಲಕವಾಗಿ ಅವರಿಗೆ ಉಂಟಾದ ವರಪ್ರಸಾದಗಳಿಗೋಸ್ಕರ ದೇವರನ್ನು ಸ್ತುತಿಸುತ್ತಾನೆ. (೩—೮. ವ.)

2. ಕೋರಿಕೆ ಎಂಬುವದು ಇನ್ನು ಮೇಲೆ ಅವರಿಗೆ ದೊರಕುವದೆಂದು ಅವರು ನಂಬಿ ನಿರೀಕ್ಷಿಸುವ ಪರಮ ಪದವಿಯನ್ನು ಕುರಿತದ್ದು. ಇದಕ್ಕಾಗಿಯೂ, ಇದನ್ನು ಹೊಂದಿ ಅನುಭವಿಸಲಿಕ್ಕಿರುವ ದೇವರ ದಾಸರ ಮೇಲೆ ಕೊಲೊಸ್ಸೆ ಸಭೆಯವರು ಇಟ್ಟ ಪ್ರೀತಿಗೋಸ್ಕರವಾಗಿಯೂ ಪೌಲನು ಅತ್ಯಂತ ಭಕ್ತಿಯಿಂದ ಕರ್ತನನ್ನು ಸ್ತುತಿಸುತ್ತಾನೆ. (೩, ೪. ವ.)

3. (ರೋಮಾ. ೧. ೮. ವಚನದ ವ್ಯಾಖ್ಯಾನ ನೋಡ ಬೇಕು.) ಸುವಾರ್ತೆಯ ಪ್ರಬಲವೂ ಅದರಿಂದುಂಟಾಗುವ ಫಲವೂ ಇದರಲ್ಲಿ ಚನ್ನಾಗಿ ತೋರುತ್ತದೆ.

4. ಕಳ್ಳಗುರುಗಳು ಬೋಧಿಸುವ ಅಸತ್ಯದ ಪ್ರಕಾರವಲ್ಲ, ದೇವರ ಕೃಪೆಯಿಂದ ಕೊಡಲ್ಪಡುವದೂ, ಕ್ರಿಸ್ತನ ಸುವಾರ್ತೆಯಲ್ಲಿ ಅಡಗಿರುವದೂ ಆದ ಸತ್ಯಕ್ಕೆ ಅನುಸಾರವಾಗಿ ನಡಿಯುವವರಲ್ಲಿ ಸುಫಲವಾಗದೆ ಇರದು.

5. ಎಪಫ್ರನು ಕೊಲೊಸ್ಸೆ ಸಭೆಯನ್ನು ಸ್ಥಾಪಿಸಿದನೆಂಬುವದನ್ನು ಕುರಿತು ಸಂದೇಹವಿದ್ದರೂ, ಅವನು ಆ ಸಭೆಯಲ್ಲಿ ಮುಖ್ಯ ಬೋಧಕನಾಗಿದ್ದನೆಂಬುವದನ್ನು ಕುರಿತು ಸಂಶಯವೇನೂ ಇಲ್ಲ. ಅವನು ಆ ಕಾಲದಲ್ಲಿ ಪೌಲನ ಸಂಗಡ ರೋಮಪುರಿಯಲ್ಲಿದ್ದನು. (೪. ೧೨. ಫಿಲೆಮೋ. ೨೩. ವ.)

6. ಸುಳ್ಳು ಶಾಸ್ತ್ರದಿಂದ ಬರುವ ಅಪಾಯಗಳಿಗೆ ಕೊಲೊಸ್ಸೆ ಸಭೆಯವರು ತಪ್ಪುವ ಹಾಗೆ ಪೌಲನಲ್ಲಿದ್ದ ಅಪೇಕ್ಷೆಯಿಂದ, ಅವರು ತಿಳುವಳಿಕೆಯಲ್ಲಿಯೂ ಜ್ಞಾನದಲ್ಲಿಯೂ ಬೆಳೆಯುವಂತೆ, ಅವರಿಗೋಸ್ಕರ ಎಡೆ ಬಿಡದೆ ಪ್ರಾರ್ಥಿಸುತ್ತೇನೆಂದು ಹೇಳುತ್ತಾನೆ. (೯—೧೧. ವ.) ಈ ಜ್ಞಾನಕ್ಕೆ ತಂದೆಯ ಕರುಣೆಯೇ ಮೂಲವಾಗಿಯೂ, ಆತನ ಪ್ರಿಯ ಕುಮಾರನೇ ಅರ್ಥವಾಗಿಯೂ ತೋರಿಸಲ್ಪಟ್ಟದೆ. (೧೨. ವ.) ಕ್ರಿಸ್ತನು ವಿಮೋಚಕನಾಗಿಯೂ, ಸೃಷ್ಟಿಕರ್ತನಾಗಿಯೂ, ಸಮಸ್ತಕ್ಕೂ ಆಧಾರಕನಾಗಿಯೂ, ಪರಿಪಾಲಿಸು



ಜ್ಞಾನದಲ್ಲಿಯೂ, ಆತ್ಮವಿವೇಕದಲ್ಲಿಯೂ, ಆವನ ಚಿತ್ತದ ತಿಳುವಿಕೆಯಿಂದ ತುಂಬಲ್ಪಡುವ ಹಾಗೆಯೂ,
೧೦,೧೧ ಸಕಲ ಸತ್ಕ್ರಿಯೆಗಳಲ್ಲಿ ಫಲ ಕೊಟ್ಟು, [1]ದೇವರ ತಿಳುವಿಕೆಯಲ್ಲಿ ಬೆಳೆದು, ಸಂತೋಷ ಸಹಿತವಾದ ಎಲ್ಲಾ
ತಾಳ್ಮೆ ದೀರ್ಘಶಾಂತಿಗಳಿಗಾಗಿ, [2]ಆವನ ಮಹಿಮೆಯ ತ್ರಾಣದ ಪ್ರಕಾರ, ಎಲ್ಲಾ ಬಲದಿಂದ ಬಲಗೊಂಡು,
೧೨ ಬೆಳಕಿನಲ್ಲಿರುವ ಪರಿಶುದ್ಧರ [3]ಬಾಧ್ಯತೆಯ ಭಾಗಕ್ಕಾಗಿ ನಮ್ಮನ್ನು ಸಿದ್ಧ ಮಾಡಿದ ತಂದೆಗೆ ಸ್ತೋತ್ರ ಮಾಡಿ,
ನೀವು ಕರ್ತನಿಗೆ ಯೋಗ್ಯವಾಗಿ ಸರ್ವಾನಂದಕ್ಕಾಗಿ ನಡೆದು ಕೊಳ್ಳುವ ಹಾಗೆಯೂ, ಬೇಡಿ ಕೊಳ್ಳುತ್ತೇವೆ.
೧೩ ಅವನು ಅಂಧಕಾರದ ಅಧಿಕಾರದೊಳಗಿಂದ ನಮ್ಮನ್ನು ತಪ್ಪಿಸಿ, ತನ್ನ [4]ಪ್ರೀತಿಯ ಮಗನ ರಾಜ್ಯದೊಳಗೆ
೧೪ ತಂದಿಟ್ಟಿದ್ದಾನೆ. ಇವನಲ್ಲಿ ಅವನ ರಕ್ತದಿಂದಾಗುವ ವಿಮೋಚನೆಯಾದ ಪಾಪಗಳ ಪರಿಹಾರವು ನಮಗುಂಟು.
೧೫ ಅವನು ಅದೃಶ್ಯನಾದ ದೇವರ ಪ್ರತಿರೂಪವೂ, ಎಲ್ಲಾ ಸೃಷ್ಟಿಯ [5]ಚೊಚ್ಚಲವನೂ, ಆಗಿದ್ದಾನೆ.
೧೬ ಯಾಕಂದರೆ ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ, ಇರುವ ದೃಶ್ಯಾದೃಶ್ಯವಾದವುಗಳೂ ಎಲ್ಲಾ
ಅವನಿಂದ ಸೃಷ್ಟಿಸಲ್ಪಟ್ಟವು; [6]ಸಿಂಹಾಸನಗಳಾಗಲಿ, ಒಡೆತನಗಳಾಗಲಿ, ಧೊರೆತನಗಳಾಗಲಿ, ಅಧಿಕಾರಗಳಾ
೧೭ ಗಲಿ, ಎಲ್ಲವುಗಳು [7]ಅವನಿಂದಲೂ ಅವನಿಗೋಸ್ಕರವೂ ಸೃಷ್ಟಿಸಲ್ಪಟ್ಟವು; ಮತ್ತು ಅವನು ಎಲ್ಲವುಗಳ ಮುಂಚೆ
೧೮ ಇದ್ದಾನೆ; ಅವನಲ್ಲಿ ಎಲ್ಲವುಗಳು [8]ಸ್ಥಾಪಿಸಲ್ಪಟ್ಟವೆ. ಮತ್ತು ಅವನು ಸಭೆ ಎಂಬ ಶರೀರದ ತಲೆಯಾಗಿದ್ದಾನೆ;
ಅವನೇ ಆದಿಯೂ, ಸತ್ತವರೊಳಗಿಂದ [9]ಚೊಚ್ಚಲವನೂ ಆಗಿದ್ದಾನೆ; ತಾನು [10]ಎಲ್ಲವುಗಳಲ್ಲಿ ಪ್ರಥಮನಾ

ವವನಾಗಿಯೂ, ಬಾಧ್ಯಸ್ಥನಾಗಿಯೂ, ಸಭೆಗೆ ಶಿರಸ್ಸಾಗಿಯೂ, ಪುನರುತ್ಥಾನದ ಕರ್ತನಾಗಿಯೂ, ಪರಲೋಕ ಭೂಲೋಕಗಳನ್ನು ಸಮ್ಮಂಧ ಪಡಿಸಿದ ಮೇಲಾದ ದೇವರಾಗಿಯೂ ಇದ್ದಾನೆ. (೧೩—೨೦. ವ.) ಆತನಿಂದುಂಟಾದ ಆಶೀರ್ವಾದಗಳನ್ನು ವಿಶ್ವಾಸದಿಂದ ನಡಿಯುವ ಭಕ್ತರು ಹೊಂದಿ ಅನುಭವಿಸುವರು. (೨೧—೨೩. ವ.) ಇದನ್ನು ಹೇಳಿ ಪೌಲನು ಕೊಲೊಸ್ಸೆ ಸಭೆಯವರಿಗೋಸ್ಕರ ಕಷ್ಟ ಪಡಲೂ, ಉಪದ್ರಗಳನ್ನು ಸಹಿಸಲೂ ಸಿದ್ಧವಾಗಿದ್ದೇನೆಂದೂ, (೨೪—೨೯. ವ.) ಅವರು ಪ್ರೀತಿಯಲ್ಲಿಯೂ, ಕ್ರಿಸ್ತ ಮಾರ್ಗದ ಸತ್ಯದ ತಿಳುವಿಕೆಯಲ್ಲಿಯೂ ಹೆಚ್ಚಾಗಿ ಬೆಳೆಯುವಂತೆ ಅಪೇಕ್ಷಿಸುತ್ತೇನೆಂದೂ ಹೇಳುತ್ತಾನೆ. (೨. ೧—೫.)

1. ಸಕಲ ಆತ್ಮನ ವರಗಳಲ್ಲಿ ಅಭಿವೃದ್ಧಿಯಾಗುವದಕ್ಕೆ ದೇವರ ತಿಳುವಿಕೆಯೇ ಮುಖ್ಯ ಯತ್ನವು.

2. ತ್ರಾಣವೇ ದೇವರ ಮಹಿಮೆಯಲ್ಲಿ ತೋರುವ ಮುಖ್ಯ ಲಕ್ಷಣವು. ಈ ಮಹಿಮೆಯನ್ನು ಗ್ರಹಿಸಿದವರೇ ತಮಗೆ ಸಂಭವಿಸುವ ಸಕಲ ಉಪದ್ರಗಳಲ್ಲಿ ತಾಳ್ಮೆಯಿಂದಲೂ ಸಂತೋಷದಿಂದಲೂ ಸಹಿಸುವರು.

3. ಬಾಧ್ಯತೆಯ ಭಾಗಕ್ಕೆ ಸಿದ್ಧ ಮಾಡಲ್ಪಟ್ಟವರೇ ಅದಕ್ಕೆ ಯೋಗ್ಯರು. ಬೆಳಕು ಎಂಬುವದು ತಿಳುವಿಕೆಯನ್ನೂ ಪರಿಶುದ್ಧತ್ವವನ್ನೂ ಸಂತೋಷವನ್ನೂ ಸೂಚಿಸುತ್ತದೆ. ಇವೇ ಪರಿಶುದ್ಧರ ಬಾಧ್ಯತೆಯು. ಇವುಗಳನ್ನು ಅವರು ಭೂಮಿಯಲ್ಲಿ ಕೊರತೆಯಾಗಿಯೂ, ಪರಲೋಕದಲ್ಲಿ ಸಂಪೂರ್ಣವಾಗಿಯೂ ಹೊಂದಿ ಅನುಭವಿಸುವರು. ಈ ಪರಮ ಸ್ವತಂತ್ರವು ಎಷ್ಟೋ ಮಹಿಮೆಯುಳ್ಳದ್ದು.

4. ಈ ವಚನದಲ್ಲಿ ಪ್ರೀತಿಯ ಮಗನು ಎಂಬುವದೂ, ಎಫೆ. ೧. ೬ಲ್ಲಿ ಪ್ರಿಯವಾದವನು ಎಂಬುವದೂ ಒಂದೇ ಅರ್ಥವುಳ್ಳವುಗಳು. ಪ್ರೀತಿಯ ಮಗನಾಗಿರುವ ಯೇಸುವಿನ ಪವಿತ್ರ ರಕ್ತದಿಂದ ಪಾಪಕ್ಷಮೆಯನ್ನು ಹೊಂದಿದ ಭಕ್ತರು ಪಾಪ ಪಿಶಾಚ ಮರಣ ಎಂಬ ಅಂಧಕಾರದ ರಾಜ್ಯವನ್ನು ಬಿಟ್ಟು ತೊಲಗಿ, ಬೆಳಕಿನ ರಾಜ್ಯಕ್ಕೆ ಶೇರಿ ಪರಮ ಸ್ವತಂತ್ರವನ್ನು ಹೊಂದಿ ಬಾಳುವರು.

5. ಅವನು ಅದೃಶ್ಯನಾದ ದೇವರ ಪ್ರತಿರೂಪವಾಗಿರುವದಲ್ಲದೆ, ಸರ್ವ ಸೃಷ್ಟಿಗೂ ಮುಂದಿನವನಾಗಿದ್ದಾನೆ. ಆತನು ಮೊದಲನೇ ಸೃಷ್ಟಿಯಲ್ಲ. ಸೃಷ್ಟಿಗೆ ಮುಂದಿನವನು. ಒಬ್ಬನೇ ಹುಟ್ಟಿದವನು ಎಂಬುವದರಲ್ಲಿ ಆತನಿಗೂ ತಂದೆಗೂ ಇರುವ ಸಮ್ಮಂಧವೂ, ಚೊಚ್ಚಲವನು ಎಂಬುವದರಲ್ಲಿ ಆತನಿಗೂ ಸೃಷ್ಟಿಗೂ ಇರುವ ಸಮ್ಮಂಧವೂ ತೋರುತ್ತದೆ. ಇದರಿಂದ ಆತನು ಸರ್ವ ಸ್ವತಂತ್ರನೆಂದು ತಿಳಿಯ ಬೇಕು. (ಇಬ್ರಿ. ೧. ೨.)

6. ಪರಮ ಸೈನ್ಯಗಳಾದ ದೇವದೂತರಲ್ಲಿ ನಾನಾ ಅಂತಸ್ತುಗಳೂ ಅಧಿಕಾರವೂ ಉಂಟೆಂದು ತೋರುತ್ತದೆ. (ರೋಮಾ. ೮. ೩೮. ಎಫೆ. ೧. ೨೧.) ಕಣ್ಣಿಗೆ ತೋರುವ ಲೋಕವನ್ನು ಮಾತ್ರವಲ್ಲ, ಕಣ್ಣಿಗೆ ಕಾಣದ ಲೋಕವನ್ನೂ, ಅದರಲ್ಲಿ ನಾನಾ ಅಂತಸ್ತುಗಳುಳ್ಳ ಆತ್ಮಗಳನ್ನೂ ಸೃಷ್ಟಿಸಿದಂಥ ಸರ್ವಕ್ಕೂ ಒಡೆಯನಾದವನು ಕ್ರಿಸ್ತನೇ.

7. ಆತನಿಂದ ಎಂಬುವದು, ಸಕಲ ಸೃಷ್ಟಿಗಳಿಗೂ ಆದಿ ಕಾರಣನು ಕ್ರಿಸ್ತನೆಂದು ಅರ್ಥವಾಗುತ್ತದೆ. ಅವನಿಗೋಸ್ಕರವೆಂಬುವದು ಸಕಲ ಸೃಷ್ಟಿಗೂ ಆದಿಯಾದ ಆತನು ಅಂತ್ಯವಾಗಿಯೂ ಇದ್ದಾನೆಂದು ಅರ್ಥವಾಗುತ್ತದೆ. ಆದದರಿಂದ ಕ್ರಿಸ್ತನು ಆದ್ಯಂತವಿಲ್ಲದ ಅನಾದಿಯಾದ ಪರಾತ್ಪರನಾಗಿದ್ದಾನೆ.

8. ಆತನು ಸಕಲವನ್ನು ಸೃಷ್ಟಿಸಿದವನಾಗಿ, ತಾನು ಸೃಷ್ಟಿಸಿದ ಸಮುಸ್ತವನ್ನು ಪರಿಪಾಲಿಸುವವನಾಗಿದ್ದಾನೆ. (ಅಪೊ. ಕ್ರಿ. ೧೭. ೨೮.)

9. ಸರ್ವ ಸೃಷ್ಟಿಗೂ ಮುಂದಿನವನೂ, (೧೫. ವ.) ಸತ್ತವರೊಳಗಿಂದ ಎದ್ದವರಲ್ಲಿ ಚೊಚ್ಚಲವನೂ ಆಗಿದ್ದಾನೆ. ಇನ್ನು ಎಂದಿಗೂ ಸಾಯದೆ ಇರುವಂತೆ ಸತ್ತವರೊಳಗಿಂದ ಎದ್ದ ಚೊಚ್ಚಲವನೂ ಪುನರುತ್ಥಾನದ ಕರ್ತನೂ ಆಗಿದ್ದಾನೆ. ಇಂಥಾ ಮಹಿಮೆಯುಳ್ಳ ಕರ್ತನ ಸಭೆ ಎಂಬ ಶರೀರದಲ್ಲಿ ಅಂಗಗಳಾಗಿರುವವರು ಎಷ್ಟೋ ಭಾಗ್ಯವಂತರು.

10. ಸೃಷ್ಟಿ ಸ್ಥಿತಿ ಲಯಗಳಿಗೆ ಆತನೇ ಮೊದಲಿನವನು.

೧೯, ೨೦ ಗುವ ಹಾಗೆಯೇ. ಯಾಕಂದರೆ ಅವನಲ್ಲಿ [1]ಸಮಸ್ತ ಸಂಪೂರ್ಣತೆಯೂ ವಾಸವಾಗಿರುವದೂ, ಅವನ
ಶಿಲುಬೆಯ ರಕ್ತದಿಂದ ಸಮಾಧಾನ ಮಾಡಿ, ಅವನ ಮೂಲವಾಗಿ ಭೂಲೋಕದಲ್ಲಿರುವವುಗಳಾಗಲಿ,
ಪರಲೋಕದಲ್ಲಿರುವವುಗಳಾಗಲಿ, ಸರ್ವವನ್ನು [2]ಅವನ ಮೂಲವಾಗಿಯೇ ತನ್ನ ಸಂಗಡ ಅನ್ಯೋನ್ಯ ಮಾ
ಡುವದೂ, ಅವನಿಗೆ ಒಳ್ಳೇದಾಗಿ ತೋಚಿತು.
೨೧ ಮತ್ತು ನೀವು ವಿಶ್ವಾಸದಲ್ಲಿ ನಿಂತು, ನೆಲೆಗೊಂಡು, ಸ್ಥಿರವಾಗಿದ್ದು, ನೀವು ಕೇಳಿದಂಥ, ಆಕಾಶದ ಕೆಳಗಿರುವ
[3]ಸರ್ವ ಸೃಷ್ಟಿಗೆ ಸಾರಲ್ಪಟ್ಟಂಥ, ಪೌಲನಾದ ನಾನು ಸೇವಕನಾದಂಥ ಸುವಾರ್ತೆಯ ನಿರೀಕ್ಷೆಯಿಂದ ಚಲಿ
೨೨ ಸಲ್ಪಡದಿದ್ದರೆ, ನಿಮ್ಮನ್ನು ಅವನ ಮುಂದೆ ಪರಿಶುದ್ಧರಾಗಿಯೂ, ನಿರ್ಮಲರಾಗಿಯೂ, ನಿರಪರಾಧಿಗಳಾಗಿ
೨೩ ಯೂ, ನಿಲ್ಲಿಸುವ ಹಾಗೆ, ಮುಂಚೆ ಪರರಾಗಿಯೂ, ನಿಮ್ಮ ಬುದ್ಧಿಯಲ್ಲಿ ದುಷ್ಟ ಕ್ರಿಯೆಗಳಿಂದ ಶತ್ರುಗಳಾ
ಗಿಯೂ ಇದ್ದ ನಿಮ್ಮನ್ನು, ಈಗಲೇ ಅವನ ಮಾಂಸದ ಶರೀರದಲ್ಲಿ, ಮರಣದ ಮೂಲವಾಗಿ ಅನ್ಯೋನ್ಯ
ಮಾಡಿದನು.

ಸಭೆಯ ಅಭಿವೃದ್ಧಿಗಾಗಿ ಪೌಲನು ಅಪೂರ್ವ ಸಾಧನೆ ಮಾಡಿದ್ದು.

೨೪ ಈಗ ನಾನು [4]ನಿಮ್ಮ ನಿಮಿತ್ತ ಪಡುವ ಶ್ರಮೆಗಳಲ್ಲಿ ಸಂತೋಷ ಪಟ್ಟು, ನನ್ನ ಮಾಂಸದಲ್ಲಿ [5]ಕ್ರಿಸ್ತನ ಉಪ
೨೫ ದ್ರಗಳ ಶೇಷವನ್ನು ಸಭೆಯಾಗಿರುವ ಅವನ ಶರೀರಕ್ಕೋಸ್ಕರ ಪೂರ್ತಿ ಮಾಡುತ್ತೇನೆ. ಅದಕ್ಕೆ ನಾನು ನಿಮ
ಗೋಸ್ಕರ, ನನಗೆ ಕೊಡಲ್ಪಟ್ಟ ದೇವರ ಮನೆವಾರ್ತೆಯ ಪ್ರಕಾರ, ದೇವರ ವಾಕ್ಯವನ್ನು ಪೂರೈಸುವದಕ್ಕೆ
೨೬ ಸೇವಕನಾದೆನು. ಅದೇನಂದರೆ, ಯುಗಗಳಾರಭ್ಯವೂ, ತಲಾಂತರಗಳಾರಭ್ಯವೂ, ಮರೆಯಾಗಿದ್ದು, ಈಗ
೨೭ ಅವನ ಪರಿಶುದ್ಧರಿಗೆ ಪ್ರಕಟವಾದ [6]ಮರ್ಮವೇ. ಇವರಿಗೆ ದೇವರು ಈ ಮರ್ಮದ ಮಹಿಮೆಯ ಐಶ್ವರ್ಯವು
[7]ಜನಾಂಗಗಳಲ್ಲಿ ಏನೆಂದು ತಿಳಿಸ ಮನಸ್ಸಾಗಿದ್ದನು; ಅದು ಮಹಿಮೆಯ ನಿರೀಕ್ಷೆಯಾದಂಥ, ನಿಮ್ಮಲ್ಲಿ ಇರು
೨೮ ವಂಥ ಕ್ರಿಸ್ತನೇ. ಅವನನ್ನು ನಾವು ಸಾರಿ, ಪ್ರತಿ ಮನುಷ್ಯನಿಗೆ ಬುದ್ಧಿ ಹೇಳಿ, [8]ಪ್ರತಿ ಮನುಷ್ಯನನ್ನು ಕ್ರಿಸ್ತ
ಯೇಸುವಿನಲ್ಲಿ ಸಂಪೂರ್ಣನಾಗಿ ನಿಲ್ಲಿಸುವ ಹಾಗೆ, ಪ್ರತಿ ಮನುಷ್ಯನಿಗೆ ಸಕಲ ಜ್ಞಾನದಲ್ಲಿ ಬೋಧಿಸುತ್ತೇನೆ.
೨೯ ಇದಕ್ಕೋಸ್ಕರ ನನ್ನಲ್ಲಿ ಬಲವಾಗಿ ಯತ್ನೈಸುವ ಅವನ ಯತ್ನದ ಪ್ರಕಾರ, [9]ಹೋರಾಡಿ ಕಷ್ಟ ಪಡುತ್ತೇನೆ.

1. ಸಮಸ್ತ ಸಂಪೂರ್ಣತೆ ಎಂಬುವದು ದೈವತ್ವದ ಸಂಪೂರ್ಣತೆಯನ್ನು ಸೂಚಿಸುತ್ತದೆ. (೨. ೯. ವಚನದ ವ್ಯಾಖ್ಯಾನ ನೋಡ ಬೇಕು.) ತಂದೆಯಲ್ಲಿ ಈ ಸಂಪೂರ್ಣತ್ವವು ನೆಲೆಯಾಗಿರುವ ಪ್ರಕಾರ ಕುಮಾರನಲ್ಲಿಯೂ ನೆಲೆಯಾಗಿರುತ್ತದೆ. ಈ ಸಂಪೂರ್ಣತ್ವವು ಮಗನಲ್ಲಿ ನೆಲೆಯಾಗಿರುವದೇ ತಂದೆಗೆ ಪ್ರಿಯವು.

2. ಸಕಲ ಸಂಪೂರ್ಣತ್ವವೂ ಉಳ್ಳ ಸಾಕ್ಷಾದ್ದೇವರಾದ ಕ್ರಿಸ್ತನು ಶಿಲುಬೆಯ ಮೇಲೆ ರಕ್ತ ಚೆಲ್ಲಿ ಸಂಪಾದಿಸಿದ ರಕ್ಷಣೆಯಾದ ಪುಣ್ಯ ಕ್ರಿಯೆಯಿಂದ ಪರಲೋಕವೂ ಭೂಲೋಕವೂ ಅನ್ಯೋನ್ಯವಾಯಿತು. ಪಾತಾಳಲೋಕದಲ್ಲಿರುವ ದುರಾತ್ಮಗಳು, ಸೈತಾನನನ್ನು ಜಯಿಸಿದ ಕರ್ತನನ್ನು ಅರಿಕೆ ಮಾಡ ಬೇಕಾಗಿದ್ದಾಗ್ಯೂ, (ಫಿಲಿ. ೨. ೧೦.) ಆತನ ಪುಣ್ಯ ಕ್ರಿಯೆಯಿಂದ ಅವರಿಗೆ ವಿಮೋಚನೆ ಇಲ್ಲವೆಂದು ಈ ವಚನದಿಂದ ತೋರುತ್ತದೆ.

3. ದೇವರ ಅಪ್ಪಣೆಯ ಪ್ರಕಾರ ಪೌಲನು ಮುಂತಾದ ದೇವರ ಸೇವಕರಿಂದ ಸರ್ವ ಸೃಷ್ಟಿಗೂ ಸುವಾರ್ತೆ ಪ್ರಸಂಗಿಸಲ್ಪಟ್ಟಿತೆಂಬುವದು ಇದರಿಂದ ಪ್ರತ್ಯಕ್ಷವಾಯಿತು. (ಮಾರ್ಕ. ೧೬. ೧೫. ರೋಮಾ. ೧. ೮. ಕೊಲೊ. ೧. ೬.)

4. ನಿಮ್ಮ ನಿಮಿತ್ತ ಎಂಬುವದು, ಜನಾಂಗಗಳವರಾದ ನಿಮ್ಮ ನಿಮಿತ್ತವೆಂಬುವ ತಾತ್ಪರ್ಯವಾಗುತ್ತದೆ. (ಅಪೊ. ಕ್ರಿ. ೨೧. ೨೮—೩೬; ೨೨. ೨೧.)

5. ಕ್ರಿಸ್ತನ ಉಪದ್ರಗಳು ಎಂಬುವದು, ಕ್ರಿಸ್ತನಿಗೋಸ್ಕರ ಪೌಲನು ಪಡ ಬೇಕಾದ ಉಪದ್ರಗಳನ್ನಾದರೂ, ತನ್ನ ದಾಸರ ಉಪದ್ರಗಳಲ್ಲಿ ಕ್ರಿಸ್ತನಿಗೆ ಆಗುವ ಉಪದ್ರಗಳನ್ನಾದರೂ ಸೂಚಿಸುತ್ತದೆ. (ಮತ್ತಾ. ೨೫. ೩೪—೪೦. ಯೆಶಾ. ೬೩. ೯.)

6. ಎಫೆ. ೧. ೯, ೧೦; ೩. ೯. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

7. ಇದು ಜನಾಂಗಗಳವರಲ್ಲಿರುವ ಭಕ್ತರನ್ನು ಸೂಚಿಸುತ್ತದೆ. ಮರ್ಮದ ಮಹಿಮೆ ಎಂಬುವದು, ಕ್ರಿಸ್ತನ ಮೂಲಕವಾಗಿ ಸಮಸ್ತ ಜನರಿಗೂ ಕೊಡಲ್ಪಡುವ ನಿತ್ಯ ಜೀವವಾದ ಪರಮ ಪದವನ್ನು ಕುರಿತದ್ದು. ಈ ಮಹಿಮೆಯ ನಂಬಿಕೆಯನ್ನು ಕೊಡುವವನು ಕ್ರಿಸ್ತನೇ. ಮಗನನ್ನು ಹೊಂದಿದವನು ಜೀವವನ್ನು ಹೊಂದಿದ್ದಾನೆಂಬುವದು ಸತ್ಯವಾಗಿದೆ. (ಯೋಹಾ. ೫. ೨೪. ೧ ಯೋಹಾ. ೫. ೧೨.)

8. ಈ ವಚನದಲ್ಲಿ ಪ್ರತಿ ಮನುಷ್ಯನೆಂಬುವದು ಮೂರು ಸಾರೆ ಬರುತ್ತದೆ. ಕಳ್ಳಗುರುಗಳು ಕೆಲಬರಿಗೆ ಮಾತ್ರ ಪ್ರಸಂಗಿಸುವರು. ಸತ್ಯವನ್ನು ಬೋಧಿಸುವ ಉತ್ತಮ ಬೋಧಕರು ಪ್ರತಿ ಮನುಷ್ಯನಿಗೂ ನಿತ್ಯಜೀವದ ಮಾರ್ಗವನ್ನು ತಿಳಿಸುವರು. ಕ್ರಿಸ್ತನೇ ಅವರ ಪ್ರಸಂಗದ ಗುರಿಯು. ಪ್ರತಿ ಮನುಷ್ಯನನ್ನು ಕ್ರಿಸ್ತನಲ್ಲಿ ಸಂಪೂರ್ಣನಾಗಿ ನಿಲ್ಲಿಸುವದೇ ಅವರ ಅಭಿಲಾಷೆಯು.

9. (೨. ೧. ಲೂಕ. ೧೩. ೨೪.) ಪೌಲನು ಪ್ರಯಾಸದಿಂದ ಮಾತ್ರವಲ್ಲ, ಹೋರಾಟದಿಂದಲೂ ತನ್ನ ಪರಮ ಕರ್ತನ ಸೇವೆಯನ್ನು ಮಾಡುತ್ತಾ ಬಂದನು. ಪ್ರತಿ ಮನುಷ್ಯನನ್ನು ಕ್ರಿಸ್ತ ಯೇಸುವಿನಲ್ಲಿ ಸಂಪೂರ್ಣನಾಗಿ ನಿಲ್ಲಿಸುವದನ್ನೇ ಮುಖ್ಯ ಗುರಿಯಾಗಿ ಇಟ್ಟು ಕೊಂಡು, ತನಗೆ ಸಂಭವಿಸಿದ ಸಕಲ ಪ್ರಯಾಸವನ್ನೂ ಹೋರಾಟವನ್ನೂ ಸರ್ವಶಕ್ತನಾದ ದೇವರ ಕೃಪೆಯಿಂದ ಮನೋತ್ಸಾಹದಿಂದ ಸಹಿಸಿ ಕೊಂಡನು.



2. ನಾನು ಎಷ್ಟೋ ಹೋರಾಡುತ್ತೇನೆಂದರೆ — ನಾ ಗಂದರೆ ನಿಮಗೋಸ್ಕರವೂ, ಲವೊದಿಕ್ಯೆಯದಲ್ಲಿರುವವರಿಗೋಸ್ಕರವೂ, [1]ಮಾಂಸದಲ್ಲಿ ನನ್ನ ಮು
೨ ಖವನ್ನು ನೋಡದವರೆಲ್ಲರಿಗೋಸ್ಕರವೂ, ತಂದೆಯಾದ ದೇವರೂ, [2]ಜ್ಞಾನ ತಿಳುವಿಕೆಗಳ
೩ ನಿಕ್ಷೇಪಗಳೆಲ್ಲಾ ಅಡಗಿರುವ ಕ್ರಿಸ್ತನೂ, ಇವರ [3]ಮರ್ಮವನ್ನು ಅವರು ತಿಳಿಯುವದಕ್ಕೆ ವಿವೇಕದ ಪೂರ್ಣ
ನಿಶ್ಚಯದ ಸಕಲ ಐಶ್ವರ್ಯಕ್ಕಾಗಿಯೂ, ಪ್ರೀತಿಯಲ್ಲಿಯೂ, ಜೋಡಿಸಲ್ಪಟ್ಟು, ಅವರ ಹೃದಯಗಳು ಆದರಿ
ಸಲ್ಪಡುವ ಹಾಗೆ, ನನಗೆ ಎಂಥ ಹೋರಾಟ ಉಂಟೆಂದು, ನೀವು ತಿಳಿದು ಕೊಳ್ಳ ಇಚ್ಛೈಸುತ್ತೇನೆ.
೪ ಆದರೆ ಯಾವನಾದರೂ [4]ಇಚ್ಚಕದ ಮಾತುಗಳಿಂದ ನಿಮ್ಮ ಬುದ್ಧಿಯನ್ನು ಕೆಡಿಸದ ಹಾಗೆ, ಇದನ್ನು ಹೇ
೫ ಳುತ್ತೇನೆ. ಯಾಕಂದರೆ ಮಾಂಸದಿಂದ ದೂರವಾಗಿದ್ದರೂ, ಆತ್ಮದಿಂದ ನಿಮ್ಮ ಸಂಗಡ ಇದ್ದು, ನಿಮ್ಮ [5]ಕ್ರ
ಮವನ್ನೂ, ನೀವು ಕ್ರಿಸ್ತನಲ್ಲಿಡುವ ವಿಶ್ವಾಸದ ದೃಢತ್ವವನ್ನೂ ನೋಡಿ, ಸಂತೋಷಿಸುತ್ತೇನೆ.
೬ [6]ಹಾಗಾದರೆ, ನೀವು [7]ಕರ್ತನಾದ ಕ್ರಿಸ್ತ ಯೇಸುವನ್ನು ಹೊಂದಿದ ಪ್ರಕಾರ, ಅವನಲ್ಲಿ ನಡೆದು ಕೊಳ್ಳಿರಿ.
೭ ಅವನಲ್ಲಿ [8]ಬೇರೂರಿ, ಕಟ್ಟಲ್ಪಟ್ಟು, ವಿಶ್ವಾಸದಲ್ಲಿ ಸ್ಥಿರ ಮಾಡಲ್ಪಟ್ಟು, ನೀವು ಬೋಧಿಸಲ್ಪಟ್ಟ ಪ್ರಕಾರ, ಅದರಲ್ಲಿ
ಸ್ತೋತ್ರ ಮಾಡಿ ಹೆಚ್ಚಿರಿ.

ಕಳ್ಳಬೋಧಕರಿಗೆ ತೊಲಗುವಂತೆ ಎಚ್ಚರಿಸಿದ್ದು; ಸರ್ವ ಸಂಪೂರ್ಣನಾದ ಕ್ರಿಸ್ತನನ್ನು
ಹೊಂದಿ ಕೊಳ್ಳ ಬೇಕೆಂದು ಆಜ್ಞಾಪಿಸಿದ್ದು.

೮ ಕ್ರಿಸ್ತನ ಪ್ರಕಾರವಲ್ಲ, [9]ಲೋಕದ ಸೂತ್ರಗಳ ಪ್ರಕಾರವೂ, ಮನುಷ್ಯರ ಸಂಪ್ರದಾಯದ ಪ್ರಕಾರವೂ, ಜ್ಞಾನ
ಬೋಧೆಯಿಂದಲೂ ವ್ಯರ್ಥ ಮೋಸದಿಂದಲೂ ಒಬ್ಬನಾದರೂ ನಿಮ್ಮನ್ನು ಸುಲುಕೊಳ್ಳದ ಹಾಗೆ, ನೋಡಿ

1. ಈ ವಚನಗಳ ಹಿಂದೆ ಮುಂದೆ ಇರುವ ಸಮ್ಮಂಧವನ್ನೂ ಮಾತುಗಳ ಕ್ರಮವನ್ನೂ ಯೋಚಿಸುವಾಗ, ಅವನ ಮುಖವನ್ನು ಕಾಣದವರಲ್ಲಿ ಕೊಲೊಸ್ಸೆಯರೂ ಲವೊದಿಕ್ಯೆಯರೂ ಶೇರಿದ್ದಾರೆಂದು ನೆನಸ ತಕ್ಕದ್ದು. ಅವನು ತಾನು ಸ್ಥಾಪಿಸಿದ ಸಭೆಗಳನ್ನೂ ದರ್ಶಿಸಿದ ಸಭೆಗಳನ್ನೂ ಕುರಿತು ಮಾತ್ರವಲ್ಲ, ತಾನು ಎಂದಿಗೂ ಕಾಣದೆ ಇದ್ದ ಸಭೆಗಳನ್ನು ಕುರಿತು ಚಿಂತೆಯುಳ್ಳವನಾಗಿದ್ದನೆಂಬುವದು ಪ್ರತ್ಯಕ್ಷವಾಗಿದೆ. (ಈ ಪತ್ರಿಕೆಯ ಪೀಠಿಕೆಯಲ್ಲಿ ನೋಡ ಬೇಕು.)

2. ದೇವರ ಮರ್ಮವಾದ ಕ್ರಿಸ್ತನಲ್ಲಿ ಜ್ಞಾನ ತಿಳುವಿಕೆಗಳ ಅಮೂಲ್ಯವಾದ ನಿಕ್ಷೇಪಗಳೆಲ್ಲಾ ಅಡಗಿರುತ್ತವೆ. (೩. ೩.) ಈ ಜ್ಞಾನದ ನಿಕ್ಷೇಪವನ್ನು ದೇವರಾತ್ಮನನ್ನು ಹೊಂದಿದವರು ಶೋಧಿಸಿ ತಿಳಿದು ಕೊಳ್ಳುವರೇ ಹೊರ್ತು ಮತ್ತೊಬ್ಬರಿಂದಲಾಗದು. (೧ ಪೇತ್ರ. ೧. ೧೦—೧೨.)

3. ಇದು ದೇವರಿಗೂ ಕ್ರಿಸ್ತನಿಗೂ ತಕ್ಕ ಸ್ವಂತ ಮರ್ಮವೆಂಬ ಅರ್ಥವಾಗುತ್ತದೆ. ಕ್ರಿಸ್ತನು ದೇವರಾಗಿಯೂ, (ಯೋಹಾ. ೧. ೧.) ದೇವರ ಮರ್ಮವಾಗಿಯೂ, (೧. ೨೬.) ಇದ್ದಾನೆ. ದೇವರು ಮಾಂಸದಲ್ಲಿ ಪ್ರತ್ಯಕ್ಷವಾದನೆಂಬುವದು ದೊಡ್ಡ ಮರ್ಮವೇ. (೧ ತಿಮೊ. ೩. ೧೬.)

4. ಕಳ್ಳಬೋಧಕರ ಇಚ್ಚಕದ ಮಾತುಗಳಿಗೆ ಮರುಳಾಗದೆ ಇರುವದಕ್ಕೆ ಕ್ರಿಸ್ತನ ವಿಷಯವಾದ ಅಂತರ್ಯದ ತಿಳುವಳಿಕೆಯೇ ಮುಖ್ಯ ಯತ್ನವು. (೧ ಕೊರಿ. ೨. ೫.)

5. ಅವರಲ್ಲಿ ಕ್ರಿಸ್ತನ ವಿಷಯ ಭಕ್ತಿವಿಶ್ವಾಸಗಳಿದ್ದದರಿಂದಲೇ ಅವರ ನಡೆ ನುಡಿಗಳೂ ಕ್ರಿಯೆಗಳೂ ಎಲ್ಲಾ ಕ್ರಮವಾಗಿದ್ದವು.

6. ೪ನೇ ವಚನದಲ್ಲಿ ಇಚ್ಚಕದ ಮಾತುಗಳನ್ನಾಡುವ ಕಳ್ಳಬೋಧಕರನ್ನು ಕುರಿತು ಹೇಳಿದ ತರುವಾಯ ಸತ್ಯವನ್ನು ಸ್ಥಿರವಾಗಿ ಹಿಡುಕೊಳ್ಳ ಬೇಕೆಂದೂ, (೬, ೭. ವ.) ಹೊರಗಿನ ಆಚಾರಗಳನ್ನೂ ಸಂಪ್ರದಾಯಗಳನ್ನೂ ಪಿಶಾಚನ ತಂತ್ರೋಪಾಯಗಳನ್ನೂ ತೊಲಗಿಸಿ ಬಿಟ್ಟ ಕ್ರಿಸ್ತ ಯೇಸುವಿನಲ್ಲಿ ಸಕಲ ಸಂಪೂರ್ಣತ್ವವೂ ವಾಸವಾಗಿದೆ ಎಂದೂ, (೮—೧೫. ವ.) ಹೊರಗಿನ ನೇಮ ನಿಷ್ಠೆಗಳನ್ನು ಕೈಕೊಳ್ಳುವದೂ, ದೂತರನ್ನು ಆರಾಧಿಸುವದೂ, ಸಭೆ ಎಂಬ ಶರೀರಕ್ಕೆ ಜೀವವನ್ನು ಕೊಟ್ಟು ಐಕ್ಯ ಪಡಿಸಿ ಕಾಪಾಡುವ ಶಿರಸ್ಸಾದ ಕ್ರಿಸ್ತನಿಗೆ ವಿರೋಧವಾಗಿರುತ್ತವೆ ಎಂದೂ, (೧೬—೧೯. ವ.) ಆತನ ಸಂಗಡ ಸತ್ತು ಎದ್ದ ಆತನ ದಾಸರು ಆತನ ಮಹಿಮೆಯನ್ನು ನೆನಸಿ, ಅದರ ವಾಂಛೆಯಿಂದ ನಡಿಯ ಬೇಕೆಂದೂ ತೋರಿಸಿ ಇದೆ. (೨೦—೨೩. ವ.; ೩. ೧—೪.)

7. ಕರ್ತನನ್ನು ಹೊಂದಿ ಆತನನ್ನು ಆರಾಧಿಸುವವರು ಕಡೇವರಿಗೂ ಆತನಲ್ಲಿ ಸ್ಥಿರವಾಗಿದ್ದು, ಆತನಿಗೆ ಸಮರ್ಪಕವಾಗಿ ನಡಿಯ ಬೇಕಾಗಿದೆ.

8. ಒಂದು ಮರವು ಭೂಮಿಯಲ್ಲಿ ತನ್ನ ಬೇರುಗಳನ್ನು ಬಿಟ್ಟು ಆಳಕ್ಕಿಳಿದು ಮೇಲೆ ಬೆಳೆಯುವ ಪ್ರಕಾರವೂ, ಆಳವಾದ ಅಸ್ತಿವಾರದ ಮೇಲೆ ಕಟ್ಟಲ್ಪಡುವ ಮಾಳಿಗೆ ದಿನೇ ದಿನೆ ಎತ್ತರವಾಗಿ ಏಳುವ ಪ್ರಕಾರವೂ, ದ್ರಾಕ್ಷೇ ಗಿಡವಾಗಿಯೂ ಬಂಡೇ ಅಸ್ತಿವಾರವಾಗಿಯೂ ಇರುವ ಕ್ರಿಸ್ತನನ್ನು ಹೊಂದಿದ ಭಕ್ತರು ಸದ್ಗುಣ ಸತ್ಕ್ರಿಯೆಗಳಲ್ಲಿ ಹೆಚ್ಚೆಚ್ಚಾಗಿ ಬೆಳೆದು ವೃದ್ಧಿ ಹೊಂದುವವರಾಗಿರ ಬೇಕು.

9. (ಈ ಪತ್ರಿಕೆಯ ಪೀಠಿಕೆಯಲ್ಲಿ ನೋಡ ಬೇಕು.) ಮನುಷ್ಯರ ಸಂಪ್ರದಾಯಗಳನ್ನೂ (ಮತ್ತಾ. ೧೫. ೩. ಮಾರ್ಕ. ೭. ೮.) ಲೋಕದ ಸೂತ್ರಗಳನ್ನೂ (ಗಲಾ. ೪. ೩, ೯.) ಹೊಂದಿದ್ದಾಗಿಯೂ, ದೈವತ್ವದ ಸಂಪೂರ್ಣತ್ವವೆಲ್ಲಾ ಅಡಗಿರುವ ಕ್ರಿಸ್ತನನ್ನು ಹೊಂದದೆ ಇರುವದಾಗಿಯೂ ಇರುವ ಜ್ಞಾನವು, ಕೃಪೆಯೂ ಸಾರವೂ ಇಲ್ಲದ ಸುಳ್ಳು ಜ್ಞಾನವಾಗಿದೆ.

೯ ಕೊಳ್ಳಿರಿ. ಯಾಕಂದರೆ ಅವನಲ್ಲಿ ದೈವತ್ವದ ಸಮಸ್ತ ಸಂಪೂರ್ಣತೆಯು ಶರೀರವಾಗಿ [1]ವಾಸ ಮಾಡುತ್ತದೆ.
೧೦ ಮತ್ತು ಸಕಲ [2]ಧೊರೆತನಕ್ಕೂ ಅಧಿಕಾರಕ್ಕೂ ತಲೆಯಾಗಿರುವ ಅವನಲ್ಲಿ ಸಂಪೂರ್ಣರಾಗಿದ್ದೀರಿ.
೧೧ ಅವನಲ್ಲಿಯೇ ಕ್ರಿಸ್ತನ ಪರಿಛೇದನೆಯಿಂದ ಮಾಂಸದ ಪಾಪಗಳ ಶರೀರವನ್ನು ತೆಗೆದು ಹಾಕುವ, [3]ಕೈಕೆಲಸ
೧೨ ವಲ್ಲದ ಪರಿಛೇದನೆಯಿಂದ ಪರಿಛೇದಿಸಲ್ಪಟ್ಟು, ಸ್ನಾನದಲ್ಲಿ ಅವನ ಕೂಡ ಹೂಣಲ್ಪಟ್ಟು, ಅದರಲ್ಲಿ
ಅವನನ್ನು ಸತ್ತವರೊಳಗಿಂದ ಎಬ್ಬಿಸಿದ [4]ದೇವರ ಯತ್ನದ ವಿಶ್ವಾಸದಿಂದ ಕೂಡ ಎಬ್ಬಿಸಲ್ಪಟ್ಟಿದ್ದೀರಿ.
೧೩ ಮತ್ತು ಅಕ್ರಮಗಳಲ್ಲಿಯೂ, ನಿಮ್ಮ ಮಾಂಸದ ಅಪರಿಛೇದನೆಯಲ್ಲಿಯೂ, ಸತ್ತವರಾಗಿದ್ದ ನಿಮ್ಮನ್ನು ಅವನ
೧೪ ಕೂಡ ಬದುಕಿಸಿ, ಅಕ್ರಮಗಳನ್ನೆಲ್ಲಾ ನಮಗೆ ಮನ್ನಿಸಿ, ನಮಗೆ ವಿರೋಧವಾಗಿದ್ದಂಥ, ನಮಗೆ ಎದುರಾ
ದಂಥ ಆಜ್ಞೆಗಳ ಕೈಬರಹವನ್ನು ಅಳಿಸಿ, ಅದನ್ನು ಮಧ್ಯದಿಂದ ತೆಗೆದು ಹಾಕಿ, ಅದನ್ನು ಶಿಲುಬೆಗೆ ಹಾಕಿ,
೧೫ [5]ಜಡಿದು, ಧೊರೆತನಗಳನ್ನೂ ಅಧಿಕಾರಗಳನ್ನೂ [6]ಸುಲುಕೊಂಡು, ಬಹಿರಂಗವಾಗಿ ನೋಟ ಮಾಡಿ, ಅವುಗಳ
ಮೇಲೆ ತನ್ನಲ್ಲಿ [7]ಜಯೋತ್ಸವ ಮಾಡಿದನು.
೧೬ [8]ಆದದರಿಂದ, ಇನ್ನು ಯಾವನಾದರೂ ಅನ್ನಪಾನಗಳಲ್ಲಿಯಾದರೂ, [9]ಹಬ್ಬ ಅಮಾವಾಸಿ ಸಬ್ಬತುಗಳ
೧೭ ವಿಷಯದಲ್ಲಿಯಾದರೂ, ನಿಮಗೆ ನ್ಯಾಯ ತೀರಿಸದಿರಲಿ. ಇವು ಮುಂದಿನವುಗಳ ನೆರಳಾಗಿವೆ, ಆದರೆ
೧೮ [10]ಶರೀರವು ಕ್ರಿಸ್ತನದೇ. [11]ಮನೋದೀನತ್ವಕ್ಕೂ ದೂತರ ಪೂಜೆಗೂ ಮನಸ್ಸು ಕೊಡುವಂಥ, ತಾನು ನೋ

1. ದೈವತ್ವದ ಸಮಸ್ತ ಸಂಪೂರ್ಣತೆಯು ಕ್ರಿಸ್ತನಲ್ಲಿ ವಾಸವಾಗಿದೆ. ಆತನು ಈ ಲೋಕದಲ್ಲಿ ಅವತರಿಸಿ ಸಂಚರಿಸಿದ ಕಾಲದಲ್ಲಿ ಈ ಸಂಪೂರ್ಣತೆಯು ಆತನಲ್ಲಿ ಪ್ರಕಟವಾಯಿತು. ಭಕ್ತರಿಗೆ ಬೇಕಾದ ಆಶೀರ್ವಾದಗಳೆಲ್ಲಾ ಆತನಲ್ಲಿ ಇರುವದರಿಂದ ಅವರು ಆತನಲ್ಲಿ ಸಂಪೂರ್ಣರಾಗಿ ತೋರುತ್ತಾರೆ. (೧೦. ವ.)

2. (೧. ೧೯. ವಚನದ ವ್ಯಾಖ್ಯಾನ ನೋಡ ಬೇಕು.) ಸಕಲ ಧೊರೆತನಗಳಿಗೂ ಅಧಿಕಾರಗಳಿಗೂ ಆದಿ ಕಾರಣಕರ್ತನಾದ ಕ್ರಿಸ್ತನಲ್ಲಿ ಕೃಪೆಯ ವರಗಳೆಲ್ಲಾ ಸಂಪೂರ್ಣವಾಗಿರುವದರಿಂದ, ಭಕ್ತಿವಿಶ್ವಾಸದಿಂದ ಆತನನ್ನು ಹೊಂದಿರುವ ಭಕ್ತರಿಗೆ ಸಕಲ ವರಗಳೂ ಉಂಟಾಗಿ ಸಂಪೂರ್ಣರಾಗುತ್ತಾರೆ. (ಎಫೆ. ೧. ೨೩; ೩. ೧೮, ೧೯.)

3. ಪರಿಛೇದನೆಯು ಆತ್ಮರಕ್ಷಣೆಗೆ ಅವಶ್ಯವೆಂದು ಯೆಹೂದ್ಯ ಬೋಧಕರು ಬೋಧಿಸಿದರು. ಇದಕ್ಕೆ ಪ್ರತಿಯಾಗಿ ಜನಾಂಗಗಳವರು ಗುಣ ಪಟ್ಟು ಸ್ನಾನ ಹೊಂದಿದಾಗ, ಕೈಕೆಲಸವಲ್ಲದ ಹೃದಯದ ಪರಿಛೇದನೆಯನ್ನು ಹೊಂದಿದ ಹಾಗೆ ಪೌಲನು ಹೇಳುತ್ತಾನೆ. (ದ್ವಿತೀಯ ನ್ಯಾ. ೧೦. ೧೬. ರೋಮಾ. ೨. ೨೯; ೬. ೩—೫.)

4. ಕ್ರಿಸ್ತನು ಜೀವದಿಂದ ಎದ್ದದರಲ್ಲಿ ದೇವರ ಅತಿಶಯವಾದ ಯತ್ನವು ಪ್ರಕಟವಾಯಿತು. ಆ ಯತ್ನವನ್ನು ನಂಬುವವರು ಆತ್ಮಾರ್ಥವಾಗಿ ಆತನ ಪುನರುತ್ಥಾನಕ್ಕೆ ಬಾಧ್ಯರಾಗುತ್ತಾರೆ.

5. ಕ್ರಿಸ್ತನು ಶಿಲುಬೆ ಮೇಲೆ ಜಡಿಯಲ್ಪಟ್ಟಾಗ ನಮಗೆ ವಿರೋಧವಾಗಿದ್ದ ನ್ಯಾಯಪ್ರಮಾಣದ ಭಾಗವು ಸಹ ಒಂದಾವರ್ತಿ ಮೊಳೆಗಳಿಂದ ಜಡಿಯಲ್ಪಟ್ಟಿತೆಂದು ಹೇಳ ಬಹುದು. ಇದನ್ನು ಮಾಡಿದರೆ ಬದುಕುವಿ ಎಂದು ನ್ಯಾಯಪ್ರಮಾಣವು ಹೇಳಿದ್ದರಿಂದ, ಅದನ್ನು ಮಾಡ ಶಕ್ತಿ ಇಲ್ಲದವರಿಗೆ ಅದು ಶಾಪವನ್ನೂ ಮರಣವನ್ನೂ ವಿಧಿಸುವದಾಗಿತ್ತು. ಆ ಶಾಪವನ್ನು ಕೃಪಾಮೂರ್ತಿಯಾದ ಕ್ರಿಸ್ತನು ಶಿಲುಬೆಯ ಮೇಲೆ ಹೊಂದಿದ ಶಪಿಸಲ್ಪಟ್ಟ ಮರಣದಿಂದ ನಿವರ್ತಿ ಮಾಡಿದನು.

6. ತಾವು ಜಯಿಸಿದ ಶತ್ರುಗಳ ವಸ್ತ್ರ ಅಸ್ತ್ರ ಶಸ್ತ್ರ ಮುಂತಾದವುಗಳನ್ನೆಲ್ಲಾ ಸುಲಿದು ಕೊಂಡು, ಅವರನ್ನು ಜನರಿಗೆ ವಿನೋದವಾಗಿ ತೋರಿಸುವದು ರೋಮಾಯರಲ್ಲಿ ವಾಡಿಕೆಯಾಗಿತ್ತು. ಇದನ್ನು ಉಪಮಾನವಾಗಿ ತೆಗೆದು ಕೊಂಡು (೨ ಕೊರಿ. ೨. ೧೪. ಎಫೆ. ೪. ೮.) ಕ್ರಿಸ್ತನು ಪಾಪ, ಪಿಶಾಚ, ಪಾತಾಳ, ಎಂಬ ಶತ್ರುಗಳ ಬಲವನ್ನು ನಾಶ ಮಾಡಿ, ಸರ್ವ ಲೋಕಕ್ಕೂ ತೋರಿಸಿದನೆಂದು ಪೌಲನು ಹೇಳುತ್ತಾನೆ.

7. ಶಿಲುಬೆಯಿಂದ ಕ್ರಿಸ್ತನಿಗೆ ಅಪಜಯವಾಗುವದೆಂದು ಶತ್ರುಗಳು ನೆನಸಿರಲಾಗಿ, ಅವರ ಯೋಚನೆಗೆ ವ್ಯತಿರಿಕ್ತವಾಗಿ, ಶಿಲುಬೆಯಿಂದ ಅವನಿಗೆ ಜಯವೂ ಶತ್ರುಗಳಿಗೆ ಅಪಜಯವೂ ಆಯಿತು. ಆತನು ತನ್ನ ಶಿಲುಬೆ ಎಂಬ ರಥದ ಮೇಲೆ ಹತ್ತಿ, ತಮ್ಮ ಸಕಲ ಶಸ್ತ್ರಾಸ್ತ್ರಗಳನ್ನು ಸೂರೆ ಕೊಟ್ಟ ಶತ್ರುಗಳನ್ನು ಸರ್ವಲೋಕವು ನೋಡ ತಕ್ಕ ಹಾಗೆ ತನ್ನ ಜಯೋತ್ಸವಕ್ಕೆ ಗುರುತಾಗಿ ನಡಿಸುತ್ತಾನೆ.

8. ಮೋಶೆಯ ಪ್ರಮಾಣವು ಮೇಲೆ ಹೇಳಿದ ರೀತಿಯಾಗಿ ಈಡೇರಿದ್ದರಿಂದ, ಆ ವಿಷಯದಲ್ಲಿ ಬಿಡುಗಡೆ ಹೊಂದಿದವರು ದಾಸರ ಹಾಗೆ ನಡಿಯ ಬೇಕಾದದ್ದಿಲ್ಲ.

9. ಇಲ್ಲಿ ಹೇಳಲ್ಪಟ್ಟ ಹಬ್ಬಗಳು ಯೆಹೂದ್ಯರು ಒಂದೊಂದು ವರುಷದಲ್ಲಿಯೂ ಮಾಸದಲ್ಲಿಯೂ ವಾರದಲ್ಲಿಯೂ ಆಚರಿಸುತ್ತಿದ್ದ ಉತ್ಸವಗಳಾಗಿದ್ದವು. (ದ್ವಿತೀಯ ನ್ಯಾ. ೧೬. ೧೪. ಅರ. ೧೦. ೧೦.)

10. ಮೇಲೆ ಹೇಳಿದ ಹಬ್ಬಗಳೆಲ್ಲಾ ನೆರಳಾಗಿದ್ದವು. ಕ್ರಿಸ್ತನೇ ಅವುಗಳ ನಿಜಾರ್ಥವು. (ಇಬ್ರಿ. ೧೦. ೧.)

11. ಮೇಲಾದ ದೇವರ ಬಳಿಗೆ ಪಾಪಾತ್ಮರಾದ ಮನುಷ್ಯರು ನೆಟ್ಟಗೆ ಹೋಗ ಕೂಡದೆಂದೂ, ದೇವದೂತರ ಮಧ್ಯಸ್ತಿಕೆಯ ಮೂಲಕವಾಗಿ ಹೋಗ ಬೇಕೆಂದೂ, ಬಹು ದೀನತ್ವವುಳ್ಳವರ ಹಾಗೆ ವೇಷ ತೋರಿಸಿದ ಕಳ್ಳಬೋಧಕರು ಬೋಧಿಸಿದರು. (೨೩. ವ.) ಅರ್ಚಶಿಷ್ಟರ ಆರಾಧನೆಗೂ ಇದೇ ಕಾರಣವನ್ನು ರೋಮನ್ ಸಭೆಯವರು ಹೇಳುವರು. ಈ ಮನೋದೀನತ್ವಕ್ಕೆ ಮಾಂಸೇಚ್ಛೆಯಿಂದ ಕಳಂಕವಾದ ಮನಸ್ಸಿನಲ್ಲಿ ವಾಸಿಸುವ ಗರ್ವವು



೧೯ ಡದವುಗಳಲ್ಲಿ ಕಾಲು ಹಾಕುವಂಥ, ತನ್ನ ಮಾಂಸಬುದ್ಧಿಯಿಂದ ಸುಮ್ಮನೆ ಉಬ್ಬಿ ಕೊಂಡಂಥ, ಕೀಲು
ನಾಡಿಗಳಿಂದ ಪೋಷಣೆ ಹೊಂದಿ [1]ಜೋಡಿಸಲ್ಪಟ್ಟು, ದೇವರ ಅಭಿವೃದ್ಧಿಯಿಂದ ವರ್ಧಿಸುವ ಶರೀರಕ್ಕೆಲ್ಲಾ
ಮೂಲವಾದ ತಲೆಯನ್ನು ಹಿಡಿದು ಕೊಳ್ಳದಂಥ ಯಾವನಾದರೂ ನಿಮಗೆ ಬಹುಮಾನ ತಪ್ಪಿಸದಿರಲಿ.
೨೦ ಹಾಗಾದರೆ, ನೀವು ಲೋಕದ [2]ಸೂತ್ರಗಳನ್ನು ಬಿಟ್ಟು, ಕ್ರಿಸ್ತನ ಸಂಗಡ ಸತ್ತವರಾಗಿದ್ದರೆ, ಲೋಕದಲ್ಲಿ
೨೧, ೨೨ ಬದುಕುವವರ ಹಾಗೆ, ಕೈ ಹಾಕ ಬೇಡ, ರುಚಿ ನೋಡ ಬೇಡ, ಮುಟ್ಟ ಬೇಡ, ಎಂಬುವ [3]ಮನು
ಷ್ಯರ ಕಟ್ಟಳೆ ಬೋಧನೆಗಳ ಪ್ರಕಾರ, ಆಜ್ಞೆಗಳಿಗೆ ಒಳಗಾಗಿರುವದೇನು? ಇವುಗಳೆಲ್ಲಾ ಬಳಸುವದರಲ್ಲಿ ನಾ
೨೩ ಶವಾಗಿ ಹೋಗುತ್ತವೆ. ಅವು ಮಾಂಸದ ತೃಪ್ತಿಗಾಗಿ ಯಾವ ಮಾನದಲ್ಲಿಯೂ ಅಲ್ಲ, ಇಚ್ಛಾಪೂಜೆಯ
ಲ್ಲಿಯೂ, ಮನೋದೀನತ್ವದಲ್ಲಿಯೂ, [4]ದೇಹದಂಡನೆಯಲ್ಲಿಯೂ, ಜ್ಞಾನದ ಹೆಸರುಳ್ಳವುಗಳಾಗಿವೆ.

ಕೇಡನ್ನು ಬಿಟ್ಟು, ಮೇಲನ್ನು ಅನುಸರಿಸಿ ನಡಿಯ ಆಜ್ಞಾಪಿಸಿದ್ದು.

3. ಆದದರಿಂದ, ನೀವು [5]ಕ್ರಿಸ್ತನ ಸಂಗಡ ಎಬ್ಬಿಸಲ್ಪಟ್ಟವರಾಗಿದ್ದರೆ, ಮೇಲೆ ಇರುವವುಗಳನ್ನು ಹುಡುಕಿರಿ.
೨ ಅಲ್ಲಿ ಕ್ರಿಸ್ತನು ದೇವರ ಬಲಕಡೆಯಲ್ಲಿ [6]ಕೂತು ಕೊಂಡಿದ್ದಾನೆ. ಭೂಲೋಕದವುಗಳನ್ನಲ್ಲ, ಮೇಲಿನವುಗಳ
೩ ನ್ನೇ [7]ಚಿಂತಿಸಿರಿ. ಯಾಕಂದರೆ ನೀವು ಸತ್ತವರಾಗಿದ್ದೀರಿ; ಮತ್ತು ನಿಮ್ಮ ಜೀವವು ಕ್ರಿಸ್ತನ ಸಂಗಡ ದೇವರಲ್ಲಿ
೪ [8]ಅಡಗಿ ಅದೆ. ನಮ್ಮ ಜೀವವಾದ ಕ್ರಿಸ್ತನು ಪ್ರತ್ಯಕ್ಷವಾಗುವಾಗ್ಯೆ, ನೀವು ಸಹ ಅವನ ಸಂಗಡ ಮಹಿಮೆ
ಯಲ್ಲಿ ಪ್ರತ್ಯಕ್ಷವಾಗುವಿರಿ.
೫ [9]ಆದದರಿಂದ, ಜಾರತ್ವವೂ, ಅಶುದ್ಧತ್ವವೂ, ಮೋಹವೂ, ದುರಾಶೆಯೂ, ವಿಗ್ರಹಾರಾಧನೆಯಾಗಿರುವ

ಊ ಅಪನಂಬಿಕೆಯೂ ಕಾರಣವಾಗಿವೆ. ಈ ಕಪಟ ದೀನತ್ವದಿಂದ ಕಣ್ಣಿಗೆ ಕಾಣದೆ ಮರೆಯಾಗಿರುವ ರಹಸ್ಯಗಳು ತಮಗೆ ಪ್ರಕಟವಾಗುತ್ತವೆಂದು ಹೆಚ್ಚಳ ಪಡುವ ಕಳ್ಳಬೋಧಕರು, ಭಕ್ತರಿಗೆ ದೊರಕುವ ಪಂಥದ ದ್ರವ್ಯವಾದ ಪರಮ ಪದವಿಯನ್ನು ತಪ್ಪಿಸುವದೇ ಅವರ ಬೋಧನೆಯ ಗುರಿಯು.

1. (ಎಫೆ. ೪. ೧೫, ೧೬. ವಚನಗಳ ವ್ಯಾಖ್ಯಾನ ನೋಡ ಬೇಕು.) ತಲೆಯಾದ ಕ್ರಿಸ್ತನನ್ನು ಹೊಂದಿ ಕೊಂಡಿರುವವರೇ ಹೊಂದಿಕೆಯಾಗಿ ಜೋಡಿಸಲ್ಪಟ್ಟು ದೇವರ ಅಭಿವೃದ್ಧಿಗೆ ಅನುಕೂಲವಾಗಿ ಬೆಳಿಯುವ ಶರೀರದ ಹಾಗೆ ಇರುವರು.

2. ೮ನೇ ವಚನದ ವ್ಯಾಖ್ಯಾನ ನೋಡ ಬೇಕು. ಗಲಾ. ೪. ೩.

3. ಇದು ಭೋಜನದ ವಿಷಯದಲ್ಲಿ ಮನುಷ್ಯರು ಏರ್ಪಡಿಸಿದ ಕಟ್ಟಳೆಗಳನ್ನು ಕುರಿತದ್ದು. ಅವುಗಳೆಲ್ಲಾ ಅನುಭವಿಸುವದರಲ್ಲಿ ನಾಶವಾಗುತ್ತವೆ. (ಮತ್ತಾ. ೧೫. ೧—೧೪. ಮಾರ್ಕ. ೭. ೧—೮, ೧೪—೨೩. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

4. ಪಂಚೇಂದ್ರಿಯಗಳನ್ನು ಜೈಸ ಬೇಕೆಂದು ಮನುಷ್ಯರು ಕಲ್ಪಿಸಿರುವ ಸೂತ್ರಗಳೆಲ್ಲಾ, ಭಕ್ತಿಯೂ, ತಾಳ್ಮೆಯೂ, ಜ್ಞಾನವೂ ಉಳ್ಳವುಗಳಂತೆ ತೋರಿದರೂ, ಮಾಂಸದ ಇಚ್ಛೆಗಳನ್ನು ಈಡೇರಿಸುವವೇ ಹೊರ್ತು, ಅವುಗಳನ್ನು ನಿಗ್ರಹಿಸಲಾರವು. ಅವುಗಳನ್ನು ನಿಗ್ರಹಿಸಿ, ನಿಜವಾದ ಭಕ್ತಿಮಾರ್ಗದಲ್ಲಿ ನಡಿಯುವದಕ್ಕೆ ದೇವರ ಕೃಪೆಯೇ ಅವಶ್ಯವು. ಯೋಗಾಭ್ಯಾಸವು, ತಪಸ್ಸು ಮುಂತಾದ ಯಾವ ಕ್ರಿಯೆಗಳಿಂದಲಾದರೂ ಮಾಂಸದಿಚ್ಛೆಗಳನ್ನು ಜಯಿಸಲಾಗದು.

5. ದೇವಭಕ್ತರು ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟವರಾಗಿಯೂ (೨. ೨೦.) ಆತನ ಸಂಗಡ ಎಬ್ಬಿಸಲ್ಪಟ್ಟವರಾಗಿಯೂ ಇರುವದರಿಂದ, (ರೋಮಾ. ೬. ೩—೧೪.) ಆತನು ಇರುವ ಮೇಲಾದ ಪರಲೋಕದ ಸಂತೋಷಗಳನ್ನು ಅಪೇಕ್ಷಿಸಿ ನಡಿಯ ತಕ್ಕದ್ದು.

6. ಸರ್ವಶಕ್ತನಾದ ದೇವರ ಬಲಪಾರ್ಶ್ವದಲ್ಲಿ ಸರ್ವ ಮಹಿಮೆಯುಳ್ಳವನಾಗಿ ಕುಳಿತಿರುವ ಕ್ರಿಸ್ತನಿಂದ, ಆತನ ಭಕ್ತರಿಗೆ ಸಕಲ ಭಾಗ್ಯವೂ ಉಂಟಾಗುವದು ನಿಶ್ಚಯವು.

7. ಚಿಂತಿಸಿರಿ ಎಂಬುವದಕ್ಕೆ ಮನಸ್ಸಿಡಿರಿ ಎಂಬರ್ಥವಾಗುತ್ತದೆ. (ರೋಮಾ. ೮. ೫. ವಚನದ ವ್ಯಾಖ್ಯಾನ ನೋಡ ಬೇಕು.) ಲೌಕಿಕದ ಮಾಯ ಸೌಖ್ಯಗಳನ್ನು ಹುಡುಕದೆ, ಪರಲೋಕದ ಸೌಖ್ಯವನ್ನೇ ಹುಡುಕ ಬೇಕು.

8. ಲೋಕಕ್ಕೂ ಅದರ ಆಶಾಪಾಶಗಳಿಗೂ ಸತ್ತವರ ಹಾಗಿರುವ ಕ್ರಿಸ್ತಭಕ್ತರ ಆತ್ಮದ ಜೀವವು ಅಮೂಲ್ಯವಾದ ನಿಕ್ಷೇಪದ ಹಾಗೆ ದೇವರಲ್ಲಿ ಬಚ್ಚಿಡಲ್ಪಟ್ಟದೆ. ಆತನ ಪ್ರೀತಿಯ ಸಮುದ್ರವೆಂಬ ಅಗಾಧದಲ್ಲಿ ಅಡಗಿರುವ ಈ ಜೀವದ ಬುಗ್ಗೆಯನ್ನು ಭೂಲೋಕದ ದುಷ್ಟ ಮನುಷ್ಯರೂ ಪಾತಾಳದ ದುರಾತ್ಮರೂ ಸಹ ಕಂಡು ಕೊಳ್ಳಲಾರರು. ಕ್ರಿಸ್ತನು ಮಹಿಮೆಯಲ್ಲಿ ಪ್ರತ್ಯಕ್ಷವಾಗುವಾಗ ಆತನಲ್ಲಿ ಮರೆಯಾಗಿರುವ ಈ ಆತ್ಮದ ಜೀವವು ಮಹಿಮೆಯಾಗಿಯೂ ಪರಿಪೂರ್ಣವಾಗಿಯೂ ಪ್ರತ್ಯಕ್ಷವಾಗುವದು. (೧ ಯೋಹಾ. ೩. ೨.)

9. ಮೇಲೆ ಹೇಳಲ್ಪಟ್ಟವುಗಳಿಂದ ಆತ್ಮದ ಜೀವವನ್ನು ಹೊಂದಿದವರಾದ ಭಕ್ತರು ಕೆಟ್ಟ ನೆನಪುಗಳನ್ನೂ ಮಾತುಗಳನ್ನೂ ಕ್ರಿಯೆಗಳನ್ನೂ ತ್ಯಜಿಸ ಬೇಕೆಂದೂ, (೫—೧೧. ವ.) ತಮ್ಮ ಕರ್ತನ ಮಹಿಮೆ ಪ್ರಕಟವಾಗ ತಕ್ಕಂತೆ ಶಾಂತವೂ ಸಮಾಧಾನವೂ ಕ್ಷಮಾಗುಣವೂ ಉಳ್ಳವರಾಗಿರ ಬೇಕೆಂದೂ, (೧೨—೧೭. ವ.) ಹೇಳಿ ಇದೆ. ಮತ್ತು ಇದರಲ್ಲಿ ನಾನಾ ಸ್ಥಿತಿಗಳಿಗೆ ತಕ್ಕ ಹಂಗುಗಳನ್ನೂ (೧೮—೨೫; ೪. ೧.) ಸ್ಥಿರವಾಗಿ ಪ್ರಾರ್ಥಿಸ ಬೇಕೆಂದೂ, ಗುಣ ಪಡದವರ ಆತ್ಮಪ್ರಯೋಜನಕ್ಕಾಗಿ ಎಚ್ಚರಿಕೆಯುಳ್ಳವರಾಗಿರ ಬೇಕೆಂದೂ ಹೇಳಿ ಇದೆ. (೨—೬. ವ.)

೬ [1]ಲೋಭವೂ, ಭೂಮಿಯ ಮೇಲಾದ ಈ ನಿಮ್ಮ [2]ಅಂಗಗಳನ್ನು ಕೊಲ್ಲಿರಿ. ಇವುಗಳಿಗೋಸ್ಕರ ದೇವರ
೭ ಕೋಪವು ಅವಿಧೇಯತ್ವದ ಮಕ್ಕಳ ಮೇಲೆ ಬರುತ್ತದೆ. ನೀವು ಸಹ ಅವುಗಳಲ್ಲಿ ಬದುಕುವಾಗ, ಅವುಗಳಲ್ಲಿ
೮ ಒಂದು ಕಾಲ ನಡೆದು ಕೊಂಡಿರಿ. ಆದರೆ ಈಗ ನೀವು ಕೋಪ, ಶಿಟ್ಟು, ಕೆಟ್ಟತನ, ದೂಷಣೆ, ನಿಮ್ಮ ಬಾ
೯ ಯಿಯಿಂದ ಹೊರಡುವ ಕೆಟ್ಟ ಮಾತು, ಇವುಗಳನ್ನೆಲ್ಲಾ ತೆಗೆದು ಹಾಕಿರಿ. ಒಬ್ಬರಿಗೊಬ್ಬರು ಸುಳ್ಳು ಹೇಳ
೧೦ ಬೇಡಿರಿ; ಹಳೇ ಮನುಷ್ಯನನ್ನು ಅವನ ಕ್ರಿಯೆಗಳ ಸಂಗಡ ತೆಗೆದು ಹಾಕಿ, ಅವನನ್ನು ಸೃಷ್ಟಿಸಿದವನ ಹೋ
೧೧ ಲಿಕೆಯ ಪ್ರಕಾರ ತಿಳುವಿಕೆಗಾಗಿ ನೂತನವಾಗುವ [3]ಹೊಸಬನನ್ನು ಧರಿಸಿ ಕೊಂಡಿರಲ್ಲ? [4]ಅಲ್ಲಿ ಗ್ರೇಕನೂ,
ಯೆಹೂದ್ಯನೂ, ಪರಿಛೇದನೆಯೂ, ಅಪರಿಛೇದನೆಯೂ, ಬರ್ಬರನೂ, ಸ್ಕುಥನೂ, ದಾಸನೂ, ಸ್ವತಂತ್ರನೂ,
ಇಲ್ಲ; ಆದರೆ ಎಲ್ಲವೂ ಎಲ್ಲರಲ್ಲಿಯೂ ಕ್ರಿಸ್ತನೇ.

೧೨ ಆದ ಕಾರಣ, ದೇವರು ಆದು ಕೊಂಡವರೂ ಪರಿಶುದ್ಧರೂ ಪ್ರಿಯರೂ ಆಗಿರುವವರ ಹಾಗೆ, ಕನಿಕರಗಳ
ಕರುಳುಗಳನ್ನೂ, ದಯವನ್ನೂ, ದೀನ ಮನಸ್ಸನ್ನೂ, ಸಾತ್ವಿಕತ್ವವನ್ನೂ, ದೀರ್ಘಶಾಂತಿಯನ್ನೂ ಧರಿಸಿ ಕೊಂ
೧೩ ಡು, ಒಬ್ಬರನ್ನೊಬ್ಬರು ತಾಳಿ ಕೊಂಡು, ಒಬ್ಬನಿಗೆ ಮತ್ತೊಬ್ಬನ ಮೇಲೆ ತಪ್ಪು ಹೊರಿಸುವ ಕಾರಣವಿದ್ದರೆ,
೧೪ ಕ್ರಿಸ್ತನು ಹ್ಯಾಗೆ ನಿಮಗೆ ಮನ್ನಿಸಿದನೋ, ಹಾಗೆಯೇ ನೀವು ಒಬ್ಬರಿಗೊಬ್ಬರು ಮನ್ನಿಸಿರಿ. [5]ಇವೆಲ್ಲವುಗಳ
೧೫ ಮೇಲೆ ಸಂಪೂರ್ಣತೆಯ ಬಂಧವಾದ ಪ್ರೀತಿಯನ್ನು ಧರಿಸಿ ಕೊಳ್ಳಿರಿ. ಮತ್ತು [6]ದೇವರ ಸಮಾಧಾನವು
ನಿಮ್ಮ ಹೃದಯಗಳಲ್ಲಿ ಆಳಲಿ; ಅದಕ್ಕೆ ಒಂದೇ ಶರೀರದಲ್ಲಿ ಕರೆಯಲ್ಪಟ್ಟಿರಿ. ಮತ್ತು ಕೃತಜ್ಞರಾಗಿರ್ರಿ.
೧೬ ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಕಲ ಜ್ಞಾನದಿಂದ ಐಶ್ವರ್ಯವಾಗಿ ವಾಸ ಮಾಡಲಿ; ಒಬ್ಬರಿಗೊಬ್ಬರು ಬೋ
ಧಿಸುತ್ತಾ, ಬುದ್ಧಿ ಹೇಳುತ್ತಾ, ಕೀರ್ತನೆಗಳಿಂದಲೂ, [7]ಗೀತಗಳಿಂದಲೂ, ಆತ್ಮಭಾವವಾದ ಹಾಡುಗಳಿಂದಲೂ,
೧೭ ನಿಮ್ಮ ಹೃದಯದೊಳಗೆ ಕರ್ತನಿಗೆ ಇಂಪಾಗಿ ಹಾಡಿರಿ. ಮತ್ತು ನೀವು ಮಾತಿನಿಂದಾಗಲಿ, ಕ್ರಿಯೆಯಿಂದಾ
ಗಲಿ, ಏನು ಮಾಡಿದರೂ, ಎಲ್ಲವನ್ನು ಕರ್ತನಾದ [8]ಯೇಸುವಿನ ಹೆಸರಿನಲ್ಲಿ ಮಾಡಿ, ಅವನ ಮುಖಾಂತರ
ತಂದೆಯಾದ ದೇವರನ್ನು ಸ್ತುತಿಸಿರಿ.

ನಾನಾ ಅಂತಸ್ತುಗಳುಳ್ಳವರು ಮಾಡ ತಕ್ಕ ಹಂಗುಗಳು.

೧೮ ಹೆಂಗಸರೇ, [9]ಕರ್ತನಲ್ಲಿ ಯೋಗ್ಯವಾದ ಪ್ರಕಾರ, ಸ್ವಂತ ಗಂಡಂದಿರಿಗೆ ಒಳಗಾಗಿರ್ರಿ.

1. (ಎಫೆ. ೫. ೩—೫. ವಚನಗಳ ವ್ಯಾಖ್ಯಾನ ನೋಡ ಬೇಕು.) ಕ್ರಿಸ್ತನು ವಾಸ ಮಾಡುವ ಹೃದಯದಲ್ಲಿ ದ್ರವ್ಯ ಎಂಬ ವಿಗ್ರಹಕ್ಕೆ ಸ್ಥಳವಿರ ಬಾರದು.

2. ಭಕ್ತರು ಕ್ರಿಸ್ತನ ಸಂಗಡ ಸತ್ತವರಾಗಿರುವದರಿಂದಲೂ, (೨. ೨೦.) ಅವರ ಆತ್ಮದ ಜೀವವು ಆತನಲ್ಲಿ ಅಡಗಿರುವದರಿಂದಲೂ, (೩. ೩.) ಲೌಕಿಕಾನುಸಾರವಾದ ಅವರ ಅಂಗಗಳನ್ನೂ, ಪರಮ ಪದವಿಗೆ ಪಕ್ವವಾಗದಂತೆ ತಡೆಯುವ ದುರಿಚ್ಛೆಗಳನ್ನೂ ದುರಭ್ಯಾಸಗಳನ್ನೂ ಅಗತ್ಯ ಕೊಲ್ಲ ಬೇಕು.

3. ಹೊಸಬನು ಎಂಬುವದು ದೇವರ ವಿಷಯವಾದ ದಿವ್ಯ ಕಾರ್ಯಗಳನ್ನು ಕುರಿತು ಪೂರ್ಣ ತಿಳುವಳಿಕೆ ಹೊಂದುವದಕ್ಕೆ ದೇವರ ಹೋಲಿಕೆಯಲ್ಲಿ ಹೊಸಬನಾಗುವದನ್ನು ಕುರಿತದ್ದು. ಪಾಪದಿಂದ ಅಶುದ್ಧವಾದ ದೇವರ ಹೋಲಿಕೆಯು ಆತನ ಕೃಪೆಯಿಂದ ಹೊಸದಾಗುತ್ತದೆ. (ಎಫೆ. ೪. ೨೨—೨೪.) ಹೀಗೆ ಹೊಸಬರಾದವರು ಸಮಸ್ತ ಪಾಪಗಳನ್ನೂ ಅಸಂಹಿಸಿ ಬಿಡ ಬೇಕು.

4. ಹೀಗೆ ಹೊಸದಾದ ಸ್ಥಿತಿಗೆ ದೇಶಾಚಾರ ಕುಲಾಚಾರ ನಾಗರಿಕಾಚಾರಗಳ್ಯಾವವೂ ಪ್ರಯೋಜನಕ್ಕೆ ಬಾರವು. ಕ್ರಿಸ್ತನು, ಯೆಹೂದ್ಯರು ಜನಾಂಗಗಳವರು ಎಂಬ ಭೇದವಿಲ್ಲದೆ, ತನ್ನನ್ನು ಶರಣು ಹೊಕ್ಕ ಭಕ್ತರೆಲ್ಲರಲ್ಲಿಯೂ ತನ್ನ ಆತ್ಮನಿಂದ ವಾಸ ಮಾಡಿ ಅವರಲ್ಲಿ ತನ್ನ ಹೋಲಿಕೆಯನ್ನು ಉಂಟು ಮಾಡುತ್ತಾನೆ. (ರೋಮಾ. ೧೦. ೧೨. ೧ಕೊರಿ. ೭. ೨೨. ಗಲಾ. ೩. ೨೮. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

5. ಪ್ರೀತಿಯು ಬೇರೆ ಸದ್ಗುಣಗಳನ್ನೆಲ್ಲಾ ಒಂದಾಗಿ ಜೋಡಿಸಿ ಸಂಪೂರ್ಣ ಮಾಡಿ ಪ್ರಕಾಶಿಸ ಮಾಡುವ ಚಿನ್ನದ ಸರಪಣಿಯ ಹಾಗಿದೆ.

6. ಭಕ್ತರ ಹೃದಯದಲ್ಲಿ ದೇವರ ಸಮಾಧಾನವು ಆಳುವದಾದರೆ, ಅವರಲ್ಲಿ ದುರ್ಗುಣಗಳೆಲ್ಲಾ ಕ್ಷಯವಾಗುವವು.

7. (ಎಫೆ. ೫. ೧೯. ವಚನದ ವ್ಯಾಖ್ಯಾನ ನೋಡ ಬೇಕು.) ಕ್ರಿಸ್ತನ ವಾಕ್ಯವು ನಮ್ಮ ಹೃದಯದಲ್ಲಿ ಸಕಲ ಜ್ಞಾನದಿಂದ ಸಂಪೂರ್ಣವಾಗಿ ವಾಸವಾಗಿದ್ದರೆ, ಮಹೋಲ್ಲಾಸದಿಂದ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಕರ್ತನನ್ನು ಕೊಂಡಾಡುವೆವು.

8. ಯಾವ ಸೇವೆಯನ್ನಾದರೂ ಯೇಸು ಕ್ರಿಸ್ತನ ನಾಮದಲ್ಲಿ ಮಾಡಿದರೆ, ಅದು ದೇವರಿಗೆ ಸಮರ್ಪಕವಾದ ಸೇವೆಯಾಗಿರುವದು. ಮನುಷ್ಯರು ತಮ್ಮ ಸ್ವಂತ ಮಹಿಮೆಗಾಗಿ ಮಾಡುವ ಯಾವ ಸೇವೆಯೂ ಆತನಿಗೆ ಸಮರ್ಪಕವಾಗಿರಲಾರದು.

9. ಸಭೆಯು ಕರ್ತನಿಗೆ ಒಳಪಟ್ಟು ವಿಧೇಯವಾಗಿ ನಡಿಯುವ ಪ್ರಕಾರ, ಹೆಂಡತಿಯರು ತಮ್ಮ ಸ್ವಂತ ಗಂಡಂದಿರಿಗೆ ಒಳಪಟ್ಟು ವಿಧೇಯರಾಗಿ ನಡಿಯುವದೇ ಅವರು ಉತ್ತಮ ಕ್ರೈಸ್ತರೆಂಬುವದಕ್ಕೆ ಸಾಕ್ಷಿಯಾಗಿರುತ್ತದೆ. (ಎಫೆ. ೫. ೨೧—೨೪. ವಚನಗಳ ವ್ಯಾಖ್ಯಾನ ನೋಡ ಬೇಕು.)



೧೯ ಗಂಡಸರೇ, ಹೆಂಡರನ್ನು ಪ್ರೀತಿ ಮಾಡಿ, ಅವರಿಗೆ ಕಹಿಯಾಗಿರ ಬೇಡಿರಿ.
೨೦ ಮಕ್ಕಳೇ, [1]ಎಲ್ಲಾದರಲ್ಲಿ ಹೆತ್ತವರಿಗೆ ವಿಧೇಯರಾಗಿರ್ರಿ; ಇದೇ ಕರ್ತನಿಗೆ ಆನಂದಕರವಾದದ್ದು.
೨೧ ತಂದೆಗಳೇ, ನಿಮ್ಮ ಮಕ್ಕಳು ಮನಗುಂದದ ಹಾಗೆ, ಅವರಿಗೆ ಕೋಪವನ್ನೆಬ್ಬಿಸ ಬೇಡಿರಿ.
೨೨ ದಾಸರೇ, ಮನುಷ್ಯರನ್ನು ಮೆಚ್ಚಿಸುವವರಾಗಿ ಕಣ್ಣುಸೇವೆಯನ್ನು ಮಾಡದೆ, ದೇವರಿಗೆ ಭಯ ಪಟ್ಟು,
ಮಾಂಸದ ಪ್ರಕಾರದ ಯಜಮಾನರಾದವರಿಗೆ ಎಲ್ಲಾದರಲ್ಲಿ ಹೃದಯದ ಯಥಾರ್ಥದಿಂದ ವಿಧೇಯರಾಗಿರ್ರಿ.
೨೩, ೨೪ ಮತ್ತು ಮಾಡುವದನ್ನೆಲ್ಲಾ ಮನುಷ್ಯರಿಗೆಂದಲ್ಲ, ಕರ್ತನಿಗೆಂದು, ಹೃದಯದಿಂದ ಮಾಡಿರಿ. ಕರ್ತನಿಂದ
ಬಾಧ್ಯತೆಯ ಪ್ರತಿಫಲವನ್ನು ಹೊಂದುವಿರೆಂದು ತಿಳಿದು ಕೊಳ್ಳುತ್ತೀರಲ್ಲ? ಯಾಕಂದರೆ ಕರ್ತನಾದ ಕ್ರಿಸ್ತನಿಗೆ
೨೫ ದಾಸರಾಗಿದ್ದೀರಿ. ಆದರೆ ಅನ್ಯಾಯ ಮಾಡುವವನು ಮಾಡಿದ ಅನ್ಯಾಯದ ಫಲವನ್ನು ಹೊಂದುವನು;
ಮುಖದಾಕ್ಷಿಣ್ಯವು ಇಲ್ಲ.

4. ಯಜಮಾನರೇ, ನಿಮಗೂ ಪರಲೋಕದಲ್ಲಿ ಯಜಮಾನನು ಇದ್ದಾನೆಂದು ತಿಳಿದು, ನ್ಯಾಯವಾದದ್ದ
ನ್ನೂ [2]ಸರಿಯಾದದ್ದನ್ನೂ ದಾಸರಿಗೆ ಕೊಡಿರಿ.

ಪ್ರಾರ್ಥನೆಯಲ್ಲಿ ನೆಲೆಯಾಗಿದ್ದು, ಕ್ರಮವಾಗಿ ನಡೆದು ಕೊಳ್ಳ ಆಜ್ಞಾಪಿಸಿದ್ದು; ಸಭೆಯನ್ನು ವಂದಿಸಿದ್ದು.

೨, ೩ ಪ್ರಾರ್ಥನೆಯಲ್ಲಿ ನೆಲೆಗೊಳ್ಳಿರಿ; ಅದರಲ್ಲಿ ಸ್ತೋತ್ರ ಮಾಡಿ, ಎಚ್ಚರವಾಗಿರ್ರಿ. ನಾನು ಬಂಧಿಸಲ್ಪಟ್ಟ
ಕಾರಣವಾದ ಕ್ರಿಸ್ತನ [3]ಮರ್ಮವನ್ನು ಮಾತಾಡುವದಕ್ಕೆ ದೇವರು ನಮಗೆ ವಾಕ್ಯದ ಬಾಗಲನ್ನು ತೆರೆಯು
೪ ವ ಹಾಗೆಯೂ, ನಾನು ಮಾತಾಡ ತಕ್ಕ ಪ್ರಕಾರ ಅದನ್ನು ಪ್ರಸಿದ್ಧಿ ಮಾಡುವ ಹಾಗೆಯೂ, ನಮಗೋ
ಸ್ಕರ ಕೂಡ ಪ್ರಾರ್ಥಿಸಿರಿ.
೫, ೬ [4]ಕಾಲವನ್ನು ಕೊಂಡು ಕೊಂಡು, ಹೊರಗಿನವರ ಕಡೆಗೆ ಜ್ಞಾನವಾಗಿ ನಡೆದು ಕೊಳ್ಳಿರಿ. ಯಾರೊ
ಬ್ಬನಿಗೆ ಹ್ಯಾಗೆ ಉತ್ತರ ಕೊಡ ಬೇಕೆಂದು ತಿಳಿಯುವ ಹಾಗೆ, [5]ನಿಮ್ಮ ಮಾತು ಯಾವಾಗಲೂ ಇಂಪಾಗಿ
ಯೂ ಉಪ್ಪಿನಿಂದ ರುಚಿಯಾದದ್ದಾಗಿಯೂ ಇರಲಿ.
೭ [6]ನನ್ನ ಸ್ಥಿತಿಯನ್ನೆಲ್ಲಾ [7]ಪ್ರಿಯ ಸಹೋದರನಾಗಿಯೂ, ನಂಬಿಕೆಯುಳ್ಳ ಸೇವಕನಾಗಿಯೂ, ಕರ್ತನಲ್ಲಿ ಜತೆದಾ
೮ ಸನಾಗಿಯೂ, ಇರುವ ತುಕಿಕನು ನಿಮಗೆ ತಿಳಿಸುವನು. ಇವನನ್ನು, ನಿಮ್ಮ ವಿಷಯಗಳನ್ನು ತಿಳಿದು, ನಿಮ್ಮ
೯ ಹೃದಯಗಳನ್ನು ಆದರಿಸುವದಕ್ಕಾಗಿಯೇ, ನಿಮ್ಮವನಾಗಿರುವ ನಂಬಿಕೆಯುಳ್ಳ ಪ್ರಿಯ ಸಹೋದರನಾದ
[8]ಒನೇಸಿಮನ ಸಂಗಡ ನಿಮ್ಮ ಬಳಿಗೆ ಕಳುಹಿಸಿದ್ದೇನೆ. ಇವರು ಇಲ್ಲಿ ಆಗುವವುಗಳನ್ನೆಲ್ಲಾ ನಿಮಗೆ ತಿಳಿಸುವರು.

1. ಎಲ್ಲಾದರಲ್ಲಿ ಎಂಬುವದು ನ್ಯಾಯವಾದ ಎಲ್ಲಾ ಕಾರ್ಯಗಳಲ್ಲಿ ಎಂದು ಅರ್ಥವಾಗುತ್ತದೆ. (ಎಫೆ. ೬. ೧.)

2. ಈ ವಚನವು ಹಿಂದಿನ ಸಂಧಿಗೆ ಶೇರ ತಕ್ಕದ್ದು. (ಎಫೆ. ೬. ೯. ವಚನದ ವ್ಯಾಖ್ಯಾನ ನೋಡ ಬೇಕು.) ಸೇವಕರನ್ನು ದಯವಾಗಿ ನಡಿಸ ಬೇಕೆಂದು ಎಫೆಸ್ಯರ ಪತ್ರಿಕೆಯಲ್ಲಿಯೂ, ಅವರನ್ನು ನ್ಯಾಯವಾಗಿಯೂ ಸರಿಯಾಗಿಯೂ ನಡಿಸ ಬೇಕೆಂದು ಈ ಪತ್ರಿಕೆಯಲ್ಲಿಯೂ ಹೇಳಿ ಇದೆ. ಇದು ಯಜಮಾನರಿಗೆ ತಕ್ಕ ಬುದ್ಧಿ ಮಾತುಗಳು.

3. ಎಫೆ. ೬. ೧೯, ೨೦. ವಚನಗಳ ವ್ಯಾಖ್ಯಾನ ನೋಡ ಬೇಕು.

4. (ಎಫೆ. ೫. ೧೬. ವಚನದ ವ್ಯಾಖ್ಯಾನ ನೋಡ ಬೇಕು.) ಗುಣ ಪಡದವರೆಲ್ಲರೂ ಕ್ರಿಸ್ತನ ಸಭೆಗೂ ರಾಜ್ಯಕ್ಕೂ ಹೊರಗಾದವರೇ. ಅವರು ಗುಣ ಪಡುವ ಹಾಗೆ ಕ್ರಿಸ್ತನ ಭಕ್ತರು ಕಾಲವನ್ನು ಲಾಭ ಮಾಡಿ ಕೊಳ್ಳುವವರಾಗಿ ಜ್ಞಾನದಿಂದಲೂ ವಿವೇಕದಿಂದಲೂ ನಡೆದು ಕೊಳ್ಳ ಬೇಕು.

5. ಕ್ರೈಸ್ತರ ಸಂಭಾಷಣೆ ನಿಸ್ಸಾರವೂ ನಿಷ್ಪ್ರಯೋಜನವೂ ಉಳ್ಳದ್ದಾಗಿರದೆ, ಬೇರೊಬ್ಬರಿಗೆ ಪ್ರಯೋಜನ ಕೊಡ ತಕ್ಕದ್ದಾಗಿ ಉಪ್ಪಿನ ಹಾಗೆ ಸಾರವುಳ್ಳದ್ದಾಗಿಯೂ, ಕೃಪೆಯನ್ನು ಕೊಡ ತಕ್ಕದ್ದಾಗಿಯೂ ಇರ ಬೇಕು. (ಎಫೆ. ೪. ೨೯.)

6. ಎಫೆ. ೬. ೨೧. ವಚನದ ವ್ಯಾಖ್ಯಾನ ನೋಡ ಬೇಕು.

7. ಕಡೆಯಾಗಿ, ಈ ಪತ್ರಿಕೆಯನ್ನು ಕೊಲೊಸ್ಸೆ ಸಭೆಯವರಿಗೆ ತೆಗೆದು ಕೊಂಡು ಹೋದ ಇಬ್ಬರು ಸಹೋದರರೂ ತನ್ನ ಸಮಾಚಾರಗಳನ್ನೆಲ್ಲಾ ತಿಳಿಸುವರೆಂದು ಪೌಲನು ಹೇಳುತ್ತಾನೆ. (೭—೯. ವ.) ಮತ್ತು ವಂದನೆಯ ಸಂಗಡಲೂ (೧೦—೧೭. ವ.) ತನ್ನ ಸ್ವಂತ ಕೈಯಿಂದ ಬರೆದ ಆಶೀರ್ವಾದದ ಸಂಗಡಲೂ (೧೮. ವ.) ಪತ್ರಿಕೆಯನ್ನು ಮುಗಿಸುತ್ತಾನೆ.

8. ಒನೇಸಿಮನೆಂಬವನನ್ನು ಕುರಿತು ಫಿಲೆಮೋ. ೧೦ನೇ ವಚನದಲ್ಲಿ ನೋಡ ಬೇಕು. ಅವನು ಕೊಲೊಸ್ಸೆ ಪಟ್ಟಣದವನಾಗಿದ್ದಾಗ್ಯೂ, ಅವನು ಕ್ರೈಸ್ತನಾದದ್ದು ಆ ಸಭೆಯವರಿಗೆ ತಿಳಿಯದೆ ಇತ್ತು.

೧೦ ನನ್ನ ಜತೆಸೆರೆಯವನಾದ ಅರಿಸ್ತಾರ್ಕನೂ, ಬಾರ್ನಬನ ಅಳಿಯನಾದ [1]ಮಾರ್ಕನೂ ನಿಮ್ಮನ್ನು ವಂದಿಸು
೧೧ ತ್ತಾರೆ. ಇವನನ್ನು ಕುರಿತು ಅಪ್ಪಣೆ ಹೊಂದಿದಿರಿ; ನಿಮ್ಮ ಹತ್ತರ ಬಂದರೆ, ಅವನನ್ನು ಅಂಗೀಕರಿಸಿರಿ. ಯು
ಸ್ತನೆಂಬ ಯೇಸುವು ಸಹ ವಂದಿಸುತ್ತಾನೆ. ಇವರು ಪರಿಛೇದನೆಯವರೇ; [2]ಇವರು ಮಾತ್ರ ದೇವರ ರಾಜ್ಯ
ಕ್ಕಾಗಿ ನನ್ನ ಜತೆಕೆಲಸದವರಾಗಿದ್ದು, ನನಗೆ ಆದರಣೆಯಾಗಿದ್ದರು.
೧೨ ನಿಮ್ಮವನಾಗಿರುವ ಕ್ರಿಸ್ತನ ದಾಸನಾದ ಎಪಫ್ರನು ನಿಮ್ಮನ್ನು ವಂದಿಸುತ್ತಾನೆ. ನೀವು ದೇವರ ಸಮಸ್ತ
ಚಿತ್ತದಲ್ಲಿ ಸಂಪೂರ್ಣರಾಗಿಯೂ ತುಂಬಿದವರಾಗಿಯೂ ನಿಲ್ಲ ಬೇಕೆಂದು, ಯಾವಾಗಲೂ ನಿಮಗೋಸ್ಕರ
೧೩ ಪ್ರಾರ್ಥನೆಗಳಲ್ಲಿ ಹೋರಾಡುತ್ತಾನೆ. ಅವನು ನಿಮಗೋಸ್ಕರವೂ, ಲವೊದಿಕ್ಯೆಯದವರಿಗೋಸ್ಕರವೂ,
[3]ಹಿಯರಾಪೊಲಿಯವರಿಗೋಸ್ಕರವೂ, ಬಹು ಆಸಕ್ತಿ ಪಡುತ್ತಾನೆಂದು, ಅವನಿಗೆ ಸಾಕ್ಷಿ ಕೊಡುತ್ತೇನೆ.
೧೪ ವೈದ್ಯನಾದ ಪ್ರಿಯ [4]ಲೂಕನೂ, ದೇಮನೂ ನಿಮ್ಮನ್ನು ವಂದಿಸುತ್ತಾರೆ.
೧೫ ಲವೊದಿಕ್ಯೆಯದಲ್ಲಿರುವ ಸಹೋದರರನ್ನೂ, [5]ನುಂಫನನ್ನೂ, ಅವನ ಮನೆಯಲ್ಲಿರುವ ಸಭೆಯನ್ನೂ ವಂದಿಸಿರಿ.
೧೬ ಮತ್ತು ಈ ಪತ್ರಿಕೆಯು ನಿಮ್ಮಲ್ಲಿ ಓದಿ ಆದ ಮೇಲೆ, ಲವೊದಿಕ್ಯೆಯದವರ ಸಭೆಯಲ್ಲಿ ಓದಲ್ಪಡುವ ಹಾಗೆ
ಯೂ, [6]ಲವೊದಿಕ್ಯೆಯದ್ದನ್ನು ನೀವು ಸಹ ಓದುವ ಹಾಗೆಯೂ ಮಾಡಿರಿ.
೧೭ ಮತ್ತು [7]ಅರ್ಕಿಪ್ಪನಿಗೆ, ನೀನು ಕರ್ತನಲ್ಲಿ ಹೊಂದಿದ ಸೇವೆಯನ್ನು ಪೂರೈಸುವ ಹಾಗೆ ನೋಡು, ಎಂದು
ಹೇಳಿರಿ.
೧೮ ಪೌಲನೆಂಬ ನನ್ನ ಸ್ವಂತ ಕೈಯಿಂದ ವಂದನೆಯು. ನನ್ನ [8]ಬಂಧಗಳನ್ನು ಜ್ಞಾಪಕ ಮಾಡಿ ಕೊಳ್ಳಿರಿ.
ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

---

1. (ಮಾರ್ಕನ ಸುವಾರ್ತೆಯ ಪೀಠಿಕೆಯಲ್ಲಿ ನೋಡ ಬೇಕು.) ಅರಿಸ್ತಾರ್ಕನು ಥೆಸ್ಸಲೊನೀಕ ಪಟ್ಟಣದವನಾಗಿಯೂ ಎಫೆಸದಲ್ಲಿ ನಡೆದ ಕಲಹದಲ್ಲಿ ಪೌಲನ ಸಂಗಡ ಇದ್ದವನಾಗಿಯೂ ಇದ್ದನು. ಬಾರ್ನಬನಿಗೆ ನೆಂಟನಾಗಿದ್ದ ಮಾರ್ಕನು ಸ್ವಲ್ಪ ಕಾಲ ಪೌಲನನ್ನು ಬಿಟ್ಟು ಅಗಲಿ ಇದ್ದಾಗ್ಯೂ, ತಿರಿಗಿ ಅವನ ಸಂಗಡ ಕೂಡಿಕೊಂಡು ಅವನಿಗೆ ಸಹಾಯಕನಾಗಿದ್ದನೆಂದು ತೋರುತ್ತದೆ. ಯುಸ್ತನೆಂಬ ಯೇಸುವು ಸಹ ಅವನಿಗೆ ಸಹಾಯಕನಾಗಿದ್ದನು. ಯೇಸು ಎಂಬ ಪರಿಶುದ್ಧ ಹೆಸರನ್ನು ಆಗಾಗ್ಯೆ ಉಚ್ಚರಿಸದ ಹಾಗೆ ಯುಸ್ತನೆಂಬ ಪ್ರತಿನಾಮದಿಂದ ಕರೆಯಲ್ಪಟ್ಟಿರುವನೆಂದು ತೋರುತ್ತದೆ.

2. ಯೆಹೂದ್ಯರಲ್ಲಿ ಪೌಲನ ಸಂಗಡ ರೋಮಪುರಿಯಲ್ಲಿದ್ದವರು ಇವರೇ. ಎಪಫ್ರನೂ (೧೨. ವ.) ಲೂಕನೂ ದೇಮನೂ (೧೪. ವ.) ಜನಾಂಗಗಳವರಾಗಿದ್ದರು.

3. ಹಿಯರಾಪೊಲಿ ಎಂಬುವದು ಫ್ರುಗ್ಯ ದೇಶಕ್ಕೆ ಸೇರಿದ್ದಾಗಿಯೂ, ಕೊಲೊಸ್ಸೆ ಲವೊದಿಕ್ಯೆಯ ಪಟ್ಟಣಗಳ ಸಮೀಪದಲ್ಲಿರುವದಾಗಿಯೂ ಇರುವ ಒಂದು ದೊಡ್ಡ ಪಟ್ಟಣವು. (ಲವೊದಿಕ್ಯೆಯ ಪಟ್ಟಣವನ್ನು ಕುರಿತು ಪ್ರಕಟ. ೩. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಪರೋಪಕಾರಗುಣದಲ್ಲಿಯೂ ಭಕ್ತಿವೈರಾಗ್ಯದಲ್ಲಿಯೂ ಹೆಸರು ಹೊಂದಿದವನಾಗಿದ್ದ ಎಪಫ್ರನು ಕೊಲೊಸ್ಸೆ ಸಭೆಯವರ ನಿಮಿತ್ತವೂ, ಲವೊದಿಕ್ಯೆಯ ಹಿಯರಾಪೊಲಿ ಎಂಬ ಪಟ್ಟಣಗಳವರ ನಿಮಿತ್ತವೂ ಬಹು ವಾಂಛೆಯಿಂದ ಪ್ರಾರ್ಥನೆ ಮಾಡಿದನು. ಅವರಿಗೆ ಸಾಧಾರಣ ಆತ್ಮನ ವರಗಳು ಉಂಟಾಗ ಬೇಕೆಂದು ಮಾತ್ರವಲ್ಲ, ದೇವರ ಚಿತ್ತಕ್ಕೆ ಸಮರ್ಪಕವಾದ ಎಲ್ಲವುಗಳಲ್ಲಿಯೂ ಸಂಪೂರ್ಣರಾಗಿಯೂ, ಪೂರ್ಣ ನಿಶ್ಚಯವುಳ್ಳವರಾಗಿಯೂ ನೆಲೆಯಾಗಿರ ಬೇಕೆಂದು ಪ್ರಾರ್ಥಿಸಿದನು.

4. ಪರಮ ವೈದ್ಯನಾದ ಕ್ರಿಸ್ತನಿಗೆ ಶಿಷ್ಯನಾಗಿದ್ದ ಲೂಕನು ಎಲ್ಲರಿಂದಲೂ ಪ್ರೀತಿ ಮಾಡಲ್ಪಟ್ಟ ವೈದ್ಯನಾಗಿದ್ದನು. ದೇಮನಿಗೆ ಹೊಗಳಿಕೆಯಾದ ಒಂದನ್ನೂ ಹೇಳಲಿಲ್ಲ. ಮುಂದಿನ ಕಾಲದಲ್ಲಿ ಅವನ ಲೌಕಿಕದ ಆಶೆಯನ್ನು ಪೌಲನು ಆಗಲೇ ಕಂಡು, ಅವನ ವಿಷಯ ಏನೂ ಹೇಳಲಿಲ್ಲವಾದೀತು. (೨ ತಿಮೊ. ೪. ೧೦.)

5. ನುಂಫನು ಲವೊದಿಕ್ಯೆಯದವನಾಗಿಯೂ ಭಕ್ತಿಯಲ್ಲಿ ಮಿಂಚಿದ ಉತ್ತಮ ಕ್ರೈಸ್ತನಾಗಿಯೂ ಇದ್ದನೆಂದು ತೋರುತ್ತದೆ.

6. ಪೌಲನು ಲವೊದಿಕ್ಯೆಯರಿಗೆ ಒಂದು ಪತ್ರಿಕೆಯನ್ನು ಬರೆದು, ಅವರು ಅದನ್ನು ಓದಿದ ತರುವಾಯ ಕೊಲೊಸ್ಸೆಯರಿಗೆ ಕಳುಹಿಸ ಬೇಕೆಂದು ಹೇಳಿರುವನು. ಆ ಪತ್ರಿಕೆಯು ಕಾಪಾಡಲ್ಪಡಲಿಲ್ಲ. ಕೆಲವರು ಅದು ಎಫೆಸ್ಯರ ಪತ್ರಿಕೆ ಎಂದು ನೆನಸುತ್ತಾರೆ. (೧ ಕೊರಿ. ೫. ೯. ವಚನದ ವ್ಯಾಖ್ಯಾನದಲ್ಲಿಯೂ, ಎಫೆಸ್ಯರ ಪತ್ರಿಕೆಯ ಪೀಠಿಕೆಯಲ್ಲಿಯೂ ನೋಡ ಬೇಕು.)

7. ಅರ್ಕಿಪ್ಪನು ಒಂದು ವೇಳೆ ಫಿಲೆಮೋನನ ಮಗನಾಗಿರುವನು. (ಫಿಲೆಮೋ. ೧, ೨. ವ.) ಎಪಫ್ರನು ಅಲ್ಲಿ ಇಲ್ಲದೆ ಇದ್ದದರಿಂದ ಅರ್ಕಿಪ್ಪನಿಗೆ ಸಭೆಯ ಸೇವೆಯು ಅಧಿಕವಾಗಿರುವದು. ದೈವಸೇವೆಯನ್ನು ಹೊಂದಿದವರು ಅದನ್ನು ಸರಿಯಾಗಿ ನಡಿಸ ಹಂಗುಳ್ಳವರಾಗಿದ್ದಾರೆ.

8. ಬಂಧನದ ಕೈಯಿಂದಲೇ ಪೌಲನು ಸಭೆಗೆ ವಂದನೆಯನ್ನು ಬರೆಯುತ್ತಾನೆ. (ರೋಮಾ. ೧೬. ೨೨. ವಚನದ ವ್ಯಾಖ್ಯಾನ ನೋಡ ಬೇಕು.)

---

# THE FIRST EPISTLE OF PAUL THE APOSTLE TO THE THESSALONIANS.

## ಅಪೊಸ್ತಲನಾದ ಪೌಲನು ಥೆಸ್ಸಲೊನೀಕ್ಯರಿಗೆ ಬರೆದ ಮೊದಲನೇ ಪತ್ರಿಕೆಯ ಪೀಠಿಕೆ.

ಥೆಸ್ಸಲೊನೀಕ ಪಟ್ಟಣವು ಮಕೆದೋನ್ಯ ದೇಶದ ಎರಡನೇ ಭಾಗಕ್ಕೆ ಮುಖ್ಯವಾದದ್ದಾಗಿಯೂ, ಸಮುದ್ರದ ರೇವಿನಲ್ಲಿ ಕಟ್ಟಲ್ಪಟ್ಟದ್ದಾಗಿಯೂ ಇತ್ತು. ಅದರಲ್ಲಿ ರೋಮಾಯ ಧೊರೆ ವಾಸವಾಗಿದ್ದಾಗ್ಯೂ, ಸ್ವದೇಶ ಅಧಿಕಾರಿಗಳಿಂದ ಆಳಲ್ಪಡುತ್ತಾ ಇತ್ತು. ಏಜಿಯನ್ ಸಮುದ್ರದಲ್ಲಿ ನಡೆಯುತ್ತಿದ್ದ ವ್ಯಾಪಾರದಿಂದ ಕೊರಿಂಥ ಪಟ್ಟಣವೂ ಎಫೆಸ ಪಟ್ಟಣವೂ ಸಂಪತ್ತುಳ್ಳವುಗಳಾಗಿದ್ದ ಪ್ರಕಾರ, ಥೆಸ್ಸಲೊನೀಕ ಪಟ್ಟಣವು ಸಹ ಸಂಪತ್ತುಳ್ಳದ್ದಾಗಿತ್ತು. ಅದರಲ್ಲಿ ೨೦,೦೦೦ ಜನರು ನಿವಾಸವಾಗಿದ್ದರು. ಅದಕ್ಕೆ ಈಗ ಸಾಲೋನಿಕಿ ಎಂಬ ಹೆಸರುಂಟು.

ವ್ಯಾಪಾರ ವಿಷಯದಲ್ಲಿ ಕೀರ್ತಿ ಹೊಂದಿದ ಬೇರೆ ಪಟ್ಟಣಗಳಲ್ಲಿ ಇದ್ದ ಪ್ರಕಾರ ಥೆಸ್ಸಲೊನೀಕದಲ್ಲಿಯೂ ಅನೇಕ ಯೆಹೂದ್ಯರು ವಾಸವಾಗಿದ್ದರು. ಅವರ ಸಭೆಮನೆಯಲ್ಲಿ ಅಪೊಸ್ತಲನಾದ ಪೌಲನು ಪ್ರಸಂಗಿಸಿದ್ದರಿಂದ ಜನಾಂಗಗಳವರಲ್ಲಿ ಅನೇಕರು ಗುಣ ಪಟ್ಟ ಕಾರಣ, ಯೆಹೂದ್ಯರು ಹೊಟ್ಟೆಕಿಚ್ಚು ಪಟ್ಟು ಕಲಹ ಮಾಡಿದರು. ಅದರಿಂದ ಅವನು ಆ ಪಟ್ಟಣವನ್ನು ತ್ವರೆಯಾಗಿ ಬಿಟ್ಟು ಹೋಗ ಬೇಕಾಯಿತು. (ಅಪೊ. ಕ್ರಿ. ೧೭. ೨—೯. ವಚನಗಳ ವ್ಯಾಖ್ಯಾನ ನೋಡ ಬೇಕು.)

ತನ್ನಿಂದ ಗುಣ ಪಟ್ಟ ಜನರಿಗೆ ಅಧಿಕ ಉಪದ್ರ ಉಂಟಾಗಿದ್ದದ್ದನ್ನು ಪೌಲನು ಕೇಳಿ, (೧. ೬; ೨. ೧೪.) ಅವರನ್ನು ನೋಡುವದಕ್ಕೆ ಎರಡು ಸಾರಿ ಪ್ರಯತ್ನ ಮಾಡಿದಾಗ್ಯೂ, (೨. ೧೭, ೧೮.) ಯೆಹೂದ್ಯರ ಕೋಪದಿಂದ ಅವನ ಕೋರಿಕೆ ಈಡೇರಲಿಲ್ಲ. (ಅಪೊ. ಕ್ರಿ. ೧೭. ೧೩—೧೫.) ಆದರೂ ಅವರ ಸ್ಥಿತಿಗತಿಗಳನ್ನು ತಿಳಿದು ಕೊಳ್ಳಲೂ, ಅವರನ್ನು ಸ್ಥಿರ ಪಡಿಸಲೂ ತಿಮೊಥೆಯನನ್ನು ಕಳುಹಿಸಿದನು. (೩. ೧, ೨.) ಅವರ ಭಕ್ತಿಯೂ, ವೈರಾಗ್ಯವೂ, ವಿಶ್ವಾಸವೂ, ಪ್ರೀತಿಯೂ, ಸ್ಥಿರತ್ವವೂ, ತನ್ನ ಮೇಲಿರುವ ವಾಂಛೆಯೂ ಮುಂತಾದ ಸದ್ಗುಣಗಳನ್ನು ಕುರಿತು ಪೌಲನು ತಿಮೊಥೆಯನಿಂದ ಕೇಳಿ ತಿಳುಕೊಂಡು ಬಹಳ ಸಂತುಷ್ಟಿ ಹೊಂದಿದನು. (೩. ೬—೧೦.) ಆದಾಗ್ಯೂ ಜ್ಞಾನವಿಷಯಗಳಲ್ಲಿ ಇನ್ನೂ ಅವರಿಗೆ ಅಧಿಕ ಬೋಧನೆ ಬೇಕಾಗಿತ್ತು. ಅವರಲ್ಲಿ ಕೆಲಬರು ಕರ್ತನು ಅತಿ ಶೀಘ್ರವಾಗಿ ಪ್ರಸನ್ನನಾಗುವನೆಂಬ ತಪ್ಪಾದ ಆಲೋಚನೆಯಿಂದ, ಅದಕ್ಕೆ ಮುಂಚೆ ಸತ್ತು ಹೋದವರು ಆತನಿಂದ ಮಹಿಮೆ ಹೊಂದಲಾರರೆಂದು ಸಂದೇಹ ಉಳ್ಳವರಾಗಿದ್ದರು. (೪. ೧೩—೧೮.) ಐಶ್ವರ್ಯವಂತರಿಂದ ಸಹಾಯ ಹೊಂದ ಬಹುದೆಂಬುವ ಆಲೋಚನೆಯಿಂದ ಕೆಲಬರು ಕೆಲಸ ಮಾಡದೆ ಸೋಮಾರಿಗಳಾಗಿದ್ದರು. (೪. ೧೧, ೧೨.) ಕೊರಿಂಥದ ಸಭೆಯವರ ಹಾಗೆ, ಥೆಸ್ಸಲೊನೀಕದ ಸಭೆಯವರಲ್ಲಿ ಕೆಲಬರು ಪ್ರವಾದಿಸುವದೂ ಬೋಧಿಸುವದೂ ಮುಂತಾದ ಆತ್ಮನ ವರಗಳನ್ನು ತಕ್ಕ ಪ್ರಕಾರ ಎಣಿಸದೆ, ತಮ್ಮ ಕೀರ್ತಿಯನ್ನು ತೋರಿಸ ತಕ್ಕ ವರಗಳನ್ನೇ ಮುಖ್ಯವಾಗಿ ಅಪೇಕ್ಷಿಸುವವರಾಗಿದ್ದರೆಂದು ತೋರುತ್ತದೆ. (೫. ೨೦.)

ಇಂಥಾ ಸ್ಥಿತಿಯಲ್ಲಿದ್ದ ಸಭೆಯವರಿಗೆ ಪೌಲನು ಈ ಪತ್ರಿಕೆಯನ್ನು ೫೨ನೇ ವರುಷದಲ್ಲಿ ಕೊರಿಂಥ ಪಟ್ಟಣದಿಂದ ಬರೆದು ಕಳುಹಿಸಿದನು. ಇದರಲ್ಲಿ ಅವರ ಮೇಲೆ ತನಗಿದ್ದ ಪ್ರೀತಿಯೂ, ಉಪದ್ರಕಾಲದಲ್ಲಿ ಅವರು ಸ್ಥಿರವಾಗಿರ ಬೇಕೆಂಬುವ ವಾಂಛೆಯೂ, ಸಕಲ ಸುಳ್ಳು ಮತಗಳ ಅಭಿಪ್ರಾಯಗಳನ್ನು ಬಿಟ್ಟು, ದೇವಭಕ್ತಿಯಲ್ಲಿ ವೃದ್ಧಿ ಹೊಂದ ಬೇಕೆಂಬುವ ಆಶೆಯೂ ಅವನಲ್ಲಿ ಬಹಳವಾಗಿತ್ತೆಂಬುವದು ಚನ್ನಾಗಿ ತೋರುತ್ತದೆ.

ಅಪೊಸ್ತಲನಾದ ಪೌಲನು ಬರೆದ ಎಲ್ಲಾ ಪತ್ರಿಕೆಗಳಲ್ಲಿಯೂ ಥೆಸ್ಸಲೊನೀಕ್ಯರಿಗೆ ಬರೆದ ಪತ್ರಿಕೆಗಳೇ ಮೊದಲಿನವುಗಳು. ಈ ಪತ್ರಿಕೆಯನ್ನು ಎರಡು ಭಾಗಗಳಾಗಿ ವಿಭಾಗಿಸ ಬಹುದು.

I. ಥೆಸ್ಸಲೊನೀಕ್ಯ ಸಭೆಯವರ ಸ್ಥಿತಿಯು; ಅವರು ಪೌಲನನ್ನು ಅಂಗೀಕರಿಸಿದ ವಿಧವು; ಪೌಲನಿಗೆ ಅವರ ಮೇಲಿದ್ದ ಆಸಕ್ತಿ ಮುಂತಾದ ವಿಷಯಗಳು. (೧—೩. ಸಂಧಿ.)

II. ಸಾಧಾರಣ ಬುದ್ಧಿಮಾತುಗಳು; ಸತ್ತು ಹೋದವರ ವಿಷಯ ಆದರಣೆಯಾದ ಕಟ್ಟಳೆಗಳು. (೪, ೫. ಸಂಧಿ.)